ಅಧ್ಯಾಯ 4

# ಮೊಗವೀರರ ಸಂಪ್ರದಾಯಗಳು

1 ಅಳಿಯ ಸಂತಾನ ಕಟ್ಟು
2 ನೂತನ ಗೃಹ ಪ್ರವೇಶ ('ಇಲ್ಲೊಕ್ಕೆಲ್')
3 ಮೈ ನೆರೆದಾಗ ನಡೆಸುವ ಆಚರಣೆಗಳು
4 ಮದುವೆ
5 ಸೀಮಂತ ಸಮಾರಂಭ ('ಬಯಕೆ ಪಾಡುನು')
6 ವಿವಾಹ ವಿಚ್ಛೇದನ
7 ವಿಧವೆ/ವಿಧುರರ ಪುನರ್ವಿವಾಹ
8 ಹೆರಿಗೆ
9 ಅಂತ್ಯಸಂಸ್ಕಾರ
10 'ಕಾಲೆಕೋಲ'

# ಮೊಗವೀರರ ಸಂಪ್ರದಾಯಗಳು

**ಅಳಿಯ ಸಂತಾನಕಟ್ಟು**

ದ್ರಾವಿಡ ಮೂಲದ ಎಲ್ಲಾ ಸಮಾಜಗಳು ಅಳಿಯ ಸಂತಾನಕಟ್ಟನ್ನು ಪಾಲಿಸುತ್ತವೆ. ಹಿಂದಿನ ಕಾಲದಲ್ಲಿ ತಂದೆಯಾದವನು ಆಹಾರ ಮತ್ತು ಇತರ ಅವಶ್ಯಕತೆಗಳನ್ನು ಒದಗಿಸುವುದಕ್ಕಾಗಿ ಮನೆಯಿಂದ ತುಂಬಾ ಸಮಯದ ತನಕ ದೂರವಿರಬೇಕಾಗುತ್ತಿದ್ದು, ತಾಯಿಯೊಬ್ಬಳೇ ಮಕ್ಕಳ ಲಾಲನೆ ಪಾಲನೆ ಮಾಡುತ್ತಿದ್ದುದರಿಂದ ಈಪದ್ಧತಿ ಜಾರಿಗೆ ಬಂದಿರಬೇಕು. ಗಂಡಸು ಅಪ್ರಾಮಾಣಿಕನಾಗಿ ಅವನ ಜೀವನದಲ್ಲಿ ಒಬ್ಬರಿಗಿಂತ ಹೆಚ್ಚು ಹೆಂಗಸರು ಇರುವುದರ ಸಾಧ್ಯತೆಯೂ ಕಾರಣವಾಗಿರಬಹುದು. ಮೇಲಿನ ಕಾರಣಗಳಿಂದ ಕುಟುಂಬದ ಕೇಂದ್ರ ಬಿಂದು ತಂದೆಯ ಬದಲು ತಾಯಿ ಆಗಿರುವ ಸಾಧ್ಯತೆ ಇದೆ. ಈ ಪದ್ಧತಿ ಭಾರತದ ಕೆಲವು ಕಡೆಗಳಲ್ಲದೆ ವಿದೇಶದಲ್ಲೂ ಪರಿಶಿಷ್ಟ ಸಮಾಜದಲ್ಲಿ ಕಾಣಸಿಗುತ್ತದೆ.

**ಐತಿಹಾಸಿಕ ಬೆಳವಣಿಗೆ**

ಅಳಿಯ ಸಂತಾನ ಕಟ್ಟಿಗೂ ಕೇರಳದ 'ಮರುಮಕತ್ತಾಯ' ಪದ್ಧತಿಗೂ ಸಾಮ್ಯತೆ ಇದೆ. ಈ ಪದ್ಧತಿ 15ನೆಯ ಶತಮಾನದಲ್ಲಿ ಆಚರಣೆಗೆ ಬಂತು ಎಂದು ಹೇಳಲಾಗುತ್ತಿದೆಯಾದರೂ ಇದಕ್ಕೆ ಸಾಕ್ಷ್ಯವಾಗಿ 1840ಕ್ಕೆ ಮೊದಲಿನ ಯಾವ ಪುರಾವೆಯೂ ಸಿಗುವುದಿಲ್ಲ. ಭೂತಾಳ ಪಾಂಡ್ಯ ಎಂಬವನು 'ಪಾಂಡಿ' ಯಾನೆ ಸರಕು ಒಯ್ಯುವ ಹಡಗಿನ ಮಾಲಿಕ. ಅಳಿಯ ಸಂತಾನ ಕಟ್ಟನ್ನು ಜಾರಿಗೆ ತಂದನು ಎಂದು ಹೇಳಲಾಗುತ್ತಿದೆ. ಭೂತಾಳ ಪಾಂಡ್ಯನ ಕುರಿತ ಬಹು ಚರ್ಚಿತ ನರಬಲಿಯ ಕುರಿತು ಇಲ್ಲಿ ಪ್ರಸ್ತಾಪಿಸುವುದು ಅನಾವಶ್ಯಕ. ಅಳಿಯ ಸಂತಾನ ಕಟ್ಟುಕಟ್ಟಳೆಗಳು ಸಮಾಜದಲ್ಲಿನ ಸ್ಥಾನಮಾನಗಳು, ಬಳಿ ('ಬರಿ' ಅಥವಾ ವಂಶಾವಳಿ) ನಡುವೆ ಮದುವೆ, ಕುಟುಂಬದ ಆಸ್ತಿಯ ನಿರ್ವಹಣೆ, ಹುಟ್ಟು ಸಾವುಗಳ ಸಂದರ್ಭ ನಡೆಸುವ ಆಚರಣೆಗಳು, ಸಂತಾನ, ದತ್ತಕ ತೆಗೆದುಕೊಳ್ಳವುದು, ಸ್ತ್ರೀಯರ ಸ್ಥಾನಮಾನ ಮತ್ತು ಅವರ ಕಡೆಗಿನ ವರ್ತನೆಯ ಬಗ್ಗೆ ಇದೆ.

**ಆಸ್ತಿಯ ಮೇಲಿನ ಹಕ್ಕು** ್ಯ

ಅಳಿಯ ಸಂತಾನಕಟ್ಟಿನ ಮುಖ್ಯ ಕುಟುಂಬದ ಆಸ್ತಿ ಹಿರಿಯ ಗಂಡಸಿನ ಹೆಸರಿನಲ್ಲಿದ್ದರೂ, ಅದನ್ನು ಅನುಭವಿಸುವ ಹಕ್ಕು ಅವನ ಜೀವಮಾನದ ತನಕ ಮಾತ್ರವಿದ್ದು ಆ ಬಳಿಕ ಅದನ್ನು ಅವನ ಅಳಿಯನಿಗೆ ವರ್ಗಾಯಿಸಲಾಗುತ್ತಿತ್ತು. ಕುಟುಂಬದ ಹಿರಿಯ ಗಂಡಸು ಕುಟುಂಬದ ದೈವಸ್ಥಾನದಲ್ಲಿ ಮಾಡಬೇಕಾದ ಎಲ್ಲಾ ಧಾರ್ಮಿಕ ಆಚರಣೆಗಳನ್ನು ಮಾಡಬೇಕಲ್ಲದೆ ಇತರ ಆಚರಣೆಗಳಲ್ಲೂ ಯಜಮಾನ ್ಯ ವಹಿಸಬೇಕಾಗುತ್ತದೆ. ಕುಟುಂಬದ ಆಸ್ತಿ ಅವನ ಸಹೋದರಿಯ ಸಂತತಿಗೆ ಸೇರಿಹೋಗುತ್ತಿತ್ತು. ಮನೆಯ ಪ್ರಧಾನ ವ್ಯಕ್ತಿ ಕುಟುಂಬದ ಸ್ತ್ರೀಯಾಗಿದ್ದು ಕುಟುಂಬದ ಎಲ್ಲಾ ಚಟುವಟಿಕೆಗಳು ಅವಳ ಉಸ್ತುವಾರಿಯಲ್ಲಿ ನಡೆಯುತ್ತಿತ್ತು. ಹಿಂದಿನ ಕಾಲದಲ್ಲಿ ಮದುವೆಯಾದ ಬಳಿಕವೂ ಸ್ತ್ರೀ ತನ್ನ ಗಂಡ ಮತ್ತು ಮಕ್ಕಳ ಜೊತೆಯಲ್ಲಿ ತನ್ನ ಮನೆಯಲ್ಲಿ ಇರುತ್ತಿದ್ದಳು. ವಿವಾಹ ವಿಚ್ಛೇದನ ಅಥವಾ ಗಂಡ ಮೃತನಾದ ಪಕ್ಷದಲ್ಲಿ ಅಳಿಯ ಸಂತಾನ ಕಟ್ಟನ್ನು ಪಾಲಿಸುವ ಕೇರಳದ ಮತ್ತು ಕರ್ನಾಟಕದ ಮಹಿಳೆಯರು ನಿರಾಶ್ರಿತರಾಗುವುದಿಲ್ಲ. ಅವರ ಆಶ್ರಯಕ್ಕೆ ಅವರ ಹಿರಿಯರ ಮನೆ ಇದ್ದೇ ಇರುತ್ತದೆ. ಅಳಿಯ ಸಂತಾನ ಕಟ್ಟನ್ನು ಪಾಲಿಸುವ ಕೇರಳದ ಮತ್ತು ಕರ್ನಾಟಕದ ಜನರು ತಮ್ಮ ಸ್ತ್ರೀಯರಿಗೆ ಗೌರವದ ಜೀವನವನ್ನು ಕೊಟ್ಟಿದ್ದಾರೆನ್ನಬಹುದು.

**ಮದುವೆಯ ಕುರಿತ ನಿಯಮಗಳು**

ಅಳಿಯ ಸಂತಾನಕಟ್ಟಿಗೆ ಸೇರಿದವರು ತಮ್ಮ ತಾಯಿಯ ಬಳಿಯನ್ನು ಅನುಸರಿಸುತ್ತಿದ್ದು ಅದೇ ಬಳಿಗೆ ಸೇರಿದವರನ್ನು ಮದುವೆಯಾಗುವುದು ನಿಷಿದ್ಧ. ಆದುದರಿಂದ ಮಕ್ಕಳು ತಂದೆಯ ಬದಲು ತಾಯಿಯ ಬಳಿಯನ್ನು ಅನುಸರಿಸುತ್ತಾರೆ. ಒಂದ ು ವೇಳೆ ತಂದೆಯ ಬಳಿಯನ್ನು ಅನುಸರಿಸಿದ್ದರೆ ಮದುವೆಯ ಸಂದರ್ಭದಲ್ಲಿ ತಾಯಿಯ ಬಳಿಯ ಕುರಿತು ವಿಚಾರಿಸುತ್ತಾರೆ. ವಧು ಮತ್ತು ವರರ ತಂದೆಯ ಬಳಿ ಒಂದೇ ಆಗಿರಬಾರದೆಂಬ ಎರಡನೆಯ ನಿರ್ಬಂಧವೂ ಇರುತ್ತದೆ. ಪಿತೃ ಪ್ರಧಾನ ಸಮಾಜದಲ್ಲಿ ಎರಡನೆಯ ನಿರ್ಬಂಧ ಮಾತ್ರ ಅನ್ವಯಿಸುತ್ತದೆ.

**ಸಾವಿನ ಸಂದರ್ಭದ ನಿಯಮಗಳು**

ಕುಟುಂಬದ ಗಂಡಸರಲ್ಲಿ ಒಬ್ಬ ಮೃತನಾದಾಗ ಅವನ ಅಂತಿಮ ಸಂಸ್ಕಾರವನ್ನು ಪಿತೃ ಪ್ರಧಾನ ಪದ್ಧತಿಯಲ್ಲಿ ಅವನ ಗಂಡು ಮಕ್ಕಳು ಮಾಡುತ್ತಾರೆ. ಆದರೆ ಮಾತೃ ಪ್ರಧಾನ ಪದ್ಧತಿ ಪ್ರಕಾರ ಅವನ ಕುಟುಂಬದ ಸಹೋದರಿಯ ಮನೆಯಲ್ಲಿ ಮಾಡುತ್ತಾರೆ. ಹೆಂಗಸು ಹಿಂದಿನ ಪದ್ಧತಿ ಪ್ರಕಾರ ತನ್ನ ತಾಯಿಯ ಮನೆಯಲ್ಲೇ ವಾಸಿಸುತ್ತಿರುವುದರಿಂದ ಅವಳ ಅಂತ್ಯ ಸಂಸ್ಕಾರವನ್ನು ಸಾಮಾನ್ಯವಾಗಿ ಅವಳ ಮನೆಯಲ್ಲೇ ಮಾಡುತ್ತಾರೆ. ಗಂಡಸು ಮೃತನಾದಗ ಎಲ್ಲಾ ಧಾರ್ಮಿಕ ಕಾರ್ಯಚರಣೆಗಳನ್ನು ಅವನ ಮಗ ಮಾಡುತ್ತಾನೆ. ಆದರೆ ಆಹಾರ ವಸ್ತುಗಳ 'ಮಿತ್ತರಿ/ಮಿಸೆಲ್' ಇಡುವುದನ್ನು ಮೃತ ಗಂಡಸಿನ ಸಹೋದರಿ ಅಥವಾ ಸೋದರ ಸೊಸೆ ಮಾಡುವುದು ಪದ್ಧತಿ.

**ಅಳಿಯ ಸಂತಾನಕಟ್ಟಿನಲ್ಲಿ ಸುಧಾರಣೆ**

ಮದ್ರಾಸು ಅಳಿಯ ಸಂತಾನ ಕಾಯಿದೆ 1949, ಅಳಿಯ ಸಂತಾನ ಕಟ್ಟಿನಲ್ಲಿ ಬದಲಾವಣೆ ತಂದು ಮದುವೆ ಮತ್ತು ಪಿತ್ರಾರ್ಜಿತ ಆಸ್ತಿಯ ಕುರಿತ ನಿಯಮಗಳನ್ನು ಕ್ರಮಬದ್ಧಗೊಳಿಸಿತು. ಕೇಂದ್ರ ಸರಕಾರ ಹಿಂದೂ ಸಮುದಾಯದಲ್ಲಿ ಅನ್ವಯವಾಗುವ ಒಂದು ಉತ್ತರಾಧಿಕಾರ ಕಾನೂನು 1956ರಲ್ಲಿ ಜಾರಿಗೆ ತಂದು, ಅದು ಇಡೀ ಭಾರತದ ಎಲ್ಲರಿಗೂ ಅನ್ವಯಿಸುವಂತೆ ಮಾಡಿತು. ಮದ್ರಾಸು ಅಳಿಯ ಸಂತಾನ ಕಾನೂನು 1949 ಮತ್ತು ಮೈಸೂರು ಸುಧಾರಿತ ಕಾನೂನು 1961 ಕುಟುಂಬದ ಎಲ್ಲಾ ಸದಸ್ಯರಿಗೂ (ಹೆಂಗಸರು/ಹೆಣ್ಣು ಮಕ್ಕಳು ಸಹಿತ) ಆಸ್ತಿಯಲ್ಲಿ ಸಮಾನ ಅಧಿಕಾರವಿತ್ತುದಲ್ಲದೆ ಆಸ್ತಿಯ ವಿಭಜನೆ, ಅಪೇಕ್ಷಿಸುವ ಹಕ್ಕನ್ನು ಕೂಡಾ ಒದಗಿಸಿತು. ಆ ಬಳಿಕ, ಕುಟುಂಬದ ಗಂಡಸರು ತಮ್ಮ ಪಾಲಿಗೆ ಬಂದ ಆಸ್ತಿಯನ್ನು, ತಮ್ಮ ಹೆಂಡತಿ ಮಕ್ಕಳಿಗೆ ಹಸ್ತಾಂತರಿಸುವುದಕ್ಕೆ ಸಾಧ್ಯವಾಯಿತು.

**ವರ್ತಮಾನದ ಪರಿಸ್ಥಿತಿ**

ಮೇಲಿನ ಕಾನೂನುಗಳು ಜಾರಿಗೆ ಬಂದ ಬಳಿಕ ಅಳಿಯ ಸಂತಾನಕಟ್ಟಿನ ಪದ್ಧತಿಗಳು ದೈವಸ್ಥಾನ ಮತ್ತು ಮೂಲಸ್ಥಾನಗಳಲ್ಲಿ ನಡೆಯುವ ಅರ್ಚನೆಗಳ ಮಟ್ಟಿಗೆ ಸೀಮಿತವಾಗಿವೆ. ಡಾ.ಜಿ.ಆರ್.ಕೃಷ್ಣ ಅವರು 1990ರಲ್ಲಿ ಕಲೆ ಹಾಕಿದ ಮಾಹಿತಿ ಪ್ರಕಾರ ('ಮೀನುಗಾರರ ಜಾತಿಗಳು ಮತ್ತು ಪಂಗಡಗಳು') ಶೇಕಡಾ 96 ಮೊಗವೀರ ಕುಟುಂಬಗಳು ಪಿತೃ ಪ್ರಧಾನ ಪದ್ಧತಿಯನ್ನು ಅನುಸರಿಸುತ್ತಿವೆ. ಇದರರ್ಥ, ಈಗ ಪಿತೃ ಸಂತಾನ ಪದ್ಧತಿಯನ್ನು ಅನುಸರಿಸುವ ಕುಟುಂಬಗಳು ಶೇಕಡಾ 100ಕ್ಕೆ

ಮುಟ್ಟಿರಬಹುದು. ಹೀಗಿದ್ದರೂ ಕೂಡಾ, ನಾವು ಕೇವಲ ಧಾರ್ಮಿಕ ಕಾರ್ಯಗಳಿಗೆ ಸೀಮಿತವಾಗಿರುವ ಅಳಿಯ ಸಂತಾನಕಟ್ಟಿನ ಪದ್ಧತಿಯಲ್ಲಿ ಬದಲಾವಣೆ ಮಾಡಿಲ್ಲ.

**ನೂತನ ಗೃಹಪ್ರವೇಶ ('ಇಲ್ಲೊಕ್ಕೆಲ್')**

ಗೃಹ ಪ್ರವೇಶದ ಆಚರಣೆಯನ್ನು ಕುಟುಂಬದ ಹಿರಿಯ ವ್ಯಕ್ತಿಯು, ಮನೆ ಕಟ್ಟಿದವರ (ಕಮ್ಮಾರರು ಮತ್ತು ಕಲ್ಲುಕುಟ್ಟಿಗರ) ಜೊತೆಗೂಡಿ ಗ್ರಾಮದ ಮುಖ್ಯಸ್ಥರ ಉಪಸ್ಥಿತಿಯಲ್ಲಿ ನೆರವೇರಿಸುತ್ತಿದ್ದರು. ಮನೆಯ ಮುಂಬಾಗಿಲನ್ನು ಮಾವಿನ ಎಲೆಗಳನ್ನು ದಾರದಿಂದ ತೋರಣ ಮಾಡಿ ಸಿಂಗರಿಸುತ್ತಿದ್ದರು. ಬ್ರಾಹ್ಮಣರನ್ನು ಕರೆಸಿ ಹವನ ಹೋಮಗಳ ಪೂಜೆ ಮಾಡುತ್ತಿರಲಿಲ್ಲ. ಹಿಂದಿನ ಕಾಲದಲ್ಲಿ ಬ್ರಾಹ್ಮಣ ಪುರೋಹಿತರು ಮೊಗವೀರರ ಮನೆಗೆ ಇದಕ್ಕಾಗಿ ಬರುವ ಪದ್ಧತಿ ಇರಲಿಲ್ಲ. ದನ ಮತ್ತು ಕರುವನ್ನು ಹೊಸ ಮನೆಯೊಳಗೆ ಒಯ್ಯುವ ಕ್ರಮ ಕೂಡ ಇರಲಿಲ್ಲ.

**ಮನೆಯ ಹೊರಗೆ ನಡೆಸುವ ವಿಧಿ**

ಗೃಹಪ್ರವೇಶ ಸಮಾರಂಭದ ಅಂಗವಾಗಿ ರಾತ್ರಿಯಲ್ಲಿ 'ಕೋಲ್ನಿನೆ' (ಒಣಗಿದ ತೆಂಗಿನ ಮರದ ಸೋಗೆಗೆ ('ಕೊಂಬು') ಬಟ್ಟೆ ಸುತ್ತಿ ಎಣ್ಣೆಯಲ್ಲಿ ಮುಳುಗಿಸಿ) ಮನೆಯ ನಾಲ್ಕು ಸುತ್ತ ಉರಿಸುತ್ತಿದ್ದರು. ಅಲ್ಲದೆ ಎಳನೀರು ಮತ್ತು ಬೂದು ಕುಂಬಳಕಾಯಿಗೆ ಹಳದಿ ಮತ್ತು ಕುಂಕುಮ ಮಿಶ್ರಣದಿಂದ ತಯಾರಿಸಿದ 'ಕುರಿನೀರನ್ನು' ಸಿಂಪಡಿಸಿ ಮನೆಯನ್ನು ವಾಸಕ್ಕೆ ಸುರಕ್ಷಿತಗೊಳಿಸುವಂತೆ ಕುಟುಂಬದ ಮತ್ತು ಗ್ರಾಮ ದೇವತೆಗೆ ಪ್ರಾರ್ಥನೆ ಸಲ್ಲಿಸುತ್ತಿದ್ದರು.

**ಗೃಹಪ್ರವೇಶದ ಸಮಯ ಒಳಗೆ ಕೊಂಡೊಯ್ಯುವ ವಸ್ತುಗಳು**

ಆ ಬಳಿಕ ಅರೆಯುವ ಕಲ್ಲು, ತೊಟ್ಟಿಲು, ಅಕ್ಕಿಮುಡಿ ಮತ್ತು ಮನೆಯವರ ಬೆಲೆಬಾಳುವ ವಸ್ತುಗಳನ್ನು ಹೊಸ ಮನೆಯ ಒಳಗೆ ಒಯ್ಯುತ್ತಿದ್ದ'ರು.

**ಮೊದಲ ಅಡುಗೆ**

ಉಕ್ಕಿ ಹರಿಯುವ ತನಕ ಹಾಲನ್ನು ಕುದಿಸಿಸುವ ಕ್ರಮವಿದ್ದು, ಇದು ಸಮೃದ್ಧಿ ಮತ್ತು ಅಭಿವೃದ್ಧಿಯ ಸಂಕೇತವೆಂದು ತಿಳಿಯುತ್ತಿದ್ದರು.

**ಅತಿಥಿಗಳ ಉಪಚಾರ**

ಅತಿಥಿಗಳು ಆಗಮಿಸಿದಾಗ ಅವರ ಪಾದ ತೊಳೆಯಲಿಕ್ಕೆ ಗಿಂಡಿಯಲ್ಲಿ ನೀರನ್ನು ಕೊಡುತ್ತಾರೆ. ಅತಿಥಿಗಳು ಮನೆಯೊಳಗೆ ಬಂದ ಬಳಿಕ ಕೂರಲು ಚಾಪೆ ಅಥವಾ ಮಣೆಯನ್ನಿತ್ತು ಬೆಲ್ಲ ಮತ್ತು ನೀರಿನ ತಂಬಿಗೆಯನ್ನು ಅವರ ಮುಂದಿಡುತ್ತಿದ್ದರು. ಅದು ಊಟದ ಹೊತ್ತು ಅಲ್ಲವಾದರೆ ವೀಳ್ಯದೆಲೆ ಮತ್ತು ಅಡಿಕೆ ಕೊಡುತ್ತಿದ್ದರು. ಚಹಾ, ಕಾಫಿ, ತಂಪು ಪಾನೀಯ ಮತ್ತು ತಿಂಡಿ ಕೊಡುವ ಪದ್ಧತಿ ಇರಲಿಲ್ಲ. ಊಟದ ಹೊತ್ತಾದರೆ ಅನ್ನ, ಮೀನುಸಾರು ಮತ್ತು ಕೆಲವು ಸಂದರ್ಭಗಳಲ್ಲಿ ಒಂದು ಲೋಟ ಹೆಂಡ ಕೊಡುತ್ತಿದ್ದರು. ಇತರ ಅಮಲು ಪಾನೀಯದ ಸೇವನೆ ಅಪರೂಪವಾಗಿತ್ತು.

### ಮೈ ನೆರೆದಾಗ ನಡೆಸುವ ಆಚರಣೆಗಳು

ಹುಡುಗಿಯು ವಯಸ್ಕಳಾದಾಗ, ಅಂದರೆ ಮೈನೆರೆದಾಗ, ಗುರಿಕಾರನ ಮನೆಯ ಹೆಂಗಸರು ಬಂದು ಅವಳಿಗೆ ಸ್ನಾನ ಮಾಡಿಸುತ್ತಾರೆ ಮತ್ತು ಮಾವಿನ ಎಲೆಗಳಿಂದ ನೀರು ಸಿಂಪಡಿಸಿ ಮನೆಯನ್ನು ಸ್ವಚ್ಛಗೊಳಿಸುತ್ತಾರೆ. ಇದು ಪ್ರಾಯಕ್ಕೆ ಬಂದವಳಿಗೆ ತನ್ನ ಪ್ರೌಢತೆಯ ಕುರಿತು ಅರಿವು ಮೂಡಿಸಲಿಕ್ಕೆ ಮತ್ತು ಅವಳು ಮುಂದೆ ಹೆಚ್ಚಿನ ಜವಾಬ್ದಾರಿಯಿಂದ ವರ್ತಿಸಬೇಕೆಂಬುದಕ್ಕೆ ಸೂಚನೆ.

### ಮದುವೆ ಆರಂಭದ ಕಾರ್ಯಕ್ರಮಗಳು

ಮದುವೆ ಏರ್ಪಾಡು ಮಾಡುವುದು ಹಿರಿಯರ ಹಕ್ಕು. ಪರಿಚಿತ ಪರಿಸರದಲ್ಲೇ ಸಂಬಂಧ ನಡೆಯುತ್ತಿತ್ತು. ಬರಿ ಅಥವಾ ಸಂತಾನದ ಹೊಂದಿಕೆಯಾಗುವುದನ್ನು ಖಚಿತಗೊಳಿಸುವುದು ಮೊದಲ ಕಾರ್ಯವಾಗಿದ್ದು ಇದರ ಜವಾಬ್ದಾರಿ ಗುರಿಕಾರರದಾಗಿತ್ತು. ಈ ಕುರಿತ ಹೆಚ್ಚಿನ ವಿವರಕ್ಕೆ 'ಅಳಿಯ ಸಂತಾನಕಟ್ಟು' ನೋಡಿ.

### ಮದುವೆಗೆ ಪೂರ್ವದ ನಿಶ್ಚಿತಾರ್ಥ

ಒಂದು ಸಾಮಾನ್ಯ ಸಮಾರಂಭದಲ್ಲಿ ಮದುವೆಯಾಗುವವರ ಗ್ರಾಮಗಳ ಗುರಿಕಾರರ/ಹಿರಿಯರ ಉಪಸ್ಥಿತಿಯಲ್ಲಿ ವಧೂ ಮತ್ತು ವರನ ಸೋದರ ಮಾವಂದಿರು ಎಲೆ ಅಡಿಕೆಗಳನ್ನು ವಿನಿಮಯ ಮಾಡುವ ಮೂಲಕ ಮದುವೆ ಪ್ರಸ್ತಾಪಕ್ಕೆ ತಮ್ಮ ಸಮ್ಮತಿ ಸೂಚಿಸುವರು. ಹಿಂದಿನ ಕಾಲದಲ್ಲಿ ವಧು ಮತ್ತು ವರ ಉಂಗುರ ವಿನಿಮಯ ಮಾಡುವ ಪದ್ಧತಿ ಇರಲಿಲ್ಲ. ತಮ್ಮ ಅನುಕೂಲತೆಗಾಗಿ ನಿಶ್ಚಿತಾರ್ಥದ ಸಮಾರಂಭವನ್ನು ಮದುವೆಯ ದಿನ ಸ್ವಲ್ಪ ಸಮಯಕ್ಕೆ ಮುಂಚೆ ಕೂಡಾ ಮಾಡುವುದುಂಟು. ದ.ಕ. ಮೊಗವೀರ ಮಹಾಜನ ಸಂಘದ 1926ರ ನಿಯಮಾವಳಿ ಪ್ರಕಾರ ನಿಶ್ಚಿತಾರ್ಥ ಸಮಾರಂಭ ಸರಳವಾಗಿರಬೇಕು ಮತ್ತು ವಧುವಿನ ಕುಟುಂಬಕ್ಕೆ ಹೆಚ್ಚಿನ ವೆಚ್ಚವಾಗದಂತೆ ಆಚರಿಸಬೇಕೆಂದು ವಿಧಿಸಲಾಗಿತ್ತು.

### ಮದರಂಗಿ ('ಮೆಹಂದಿ')

ಮದುಮಗಳು ಮತ್ತು ಮದುಮಗ ಸುಂದರವಾಗಿ ಕಾಣವಂತೆ ಮಾಡಲು ಬಳಸುವ- ಮೊದಲ ಸಮಾರಂಭ ಮದರಂಗಿ. ಕುಟುಂಬದೊಳಗೆ ನಡೆಯುವ ಈ ಸಾಧಾರಣ ಸಮಾರಂಭ, ದೇವರ ಪ್ರಾರ್ಥನೆ ಮತ್ತು ಸಸ್ಯಾಹಾರಿ ಊಟದಿಂದ ಮುಕ್ತಾಯವಾಗುತ್ತಿತ್ತು. ಮದರಂಗಿ ಎಲೆಯನ್ನು ತಂದು ಮನೆಯಲ್ಲಿಯೇ ಮದರಂಗಿ ತಯಾರಿಸುತ್ತಿದ್ದರು. ಮದರಂಗಿ ಹಚ್ಚುವಾಗ ಹಿರಿಯ ವ್ಯಕ್ತಿಗಳು ತುಳು ಪಾಡ್ದಾನ ಹಾಡುತ್ತಿದ್ದರು. ಮದರಂಗಿಯನ್ನು ಸ್ವಲ್ಪ ಹೊತ್ತಿನ ತನಕ ಒಣಗಲು ಬಿಡುತ್ತಾರೆ. ಇಂದಿನಂತೆ ಆಗಿನ ಕಾಲದಲ್ಲಿ ಮದರಂಗಿ ಸಮಾರಂಭದಲ್ಲಿ ಸಂಗೀತ ನೃತ್ಯಗಳು ಅಥವಾ ಮದ್ಯ ಮಾಂಸಾಹಾರದ ಭೋಜನ ಇರುತ್ತಿರಲಿಲ್ಲ.

**ಕಲಶ ನೀರು ಸ್ನಾನ**

ಮದುವೆ ದಿನದ ಪ್ರಾತಃಕಾಲ, ವಧೂ–ವರರಿಬ್ಬರಿಗೂ ಕಲಶನೀರು ಸ್ನಾನವನ್ನು ಅವರವರ ಊರಿನ ಗುರಿಕಾರನ ಮನೆಯ ಹೆಂಗಸರು ಮಾಡಿಸುತ್ತಿದ್ದರು. ಇದು ಈಗ ದೇವಾಲಯದ ತೀರ್ಥಸ್ನಾನವಾಗಿ ಪರಿವರ್ತನೆಯಾಗಿದೆ.

**ಮದುವೆ ಮಂಟಪ**

ಸಾಮಾನ್ಯವಾಗಿ ಮದುವೆ ಮದುಮಗನ ಮನೆಯಲ್ಲಿ ಗ್ರಾಮದ ಜನರು ತೆಂಗಿನ ಸೋಗೆಯಿಂದ ನಿರ್ಮಿಸಿದ ತಾತ್ಕಾಲಿಕ ಮಂಟಪದಲ್ಲಿ ನಡೆಯುತ್ತಿತ್ತು. ಈ ಮಂಟಪದ ಒಂದು ಭಾಗವನ್ನು ಬಿಳಿ ಬಟ್ಟೆಯಿಂದ ಆಚ್ಛಾದಿಸಿ ಮಧ್ಯೆ ಮಾವಿನ ಎಲೆಗಳಿಂದ ಸುತ್ತಿದ ಒಂದು ತೆಂಗಿನಕಾಯಿಯನ್ನು ಜೋತುಹಾಕುತ್ತಾರೆ. ಇದಕ್ಕೆ 'ಕೊಡಿ' ಅನ್ನುತ್ತಾರೆ. ಇದು ಶುಭ ಸಂಕೇತ. ಮುಖ್ಯ ಪ್ರವೇಶ ದ್ವಾರದಲ್ಲಿ ಬಾಳೆಯ ಗಿಡಗಳನ್ನು ನಿಲ್ಲಿಸಿ ಮಾವಿನ ಎಲೆಗಳಿಂದ ಮಂಟಪವನ್ನು ಸಿಂಗರಿಸುತ್ತಾರೆ.

**ವಧೂವಿನ ವೇಷಭೂಷಣಗಳು**

ಮದುವೆಯ ದಿನ ಮದುಮಗಳು ನೆತ್ತಿಯಿಂದ ಕಾಲ್ಬೆರಳ ತನಕ ಆಭರಣಗಳನ್ನು ತೊಡುತ್ತಾಳೆ. ಈ ಆಭರಣಗಳನ್ನು ಇತರರಿಂದ ಎರವಲು ತಂದಿರಬಹುದು ಇಲ್ಲವೆ ಗ್ರಾಮಸಭೆಗಳು ಇಂಥಾ ಸಮಾರಂಭಗಳಿಗಾಗಿ ಒದಗಿಸಿದ್ದಿರಬಹುದು. ತಲೆಯ ಮುಂಭಾಗದಲ್ಲಿ 'ನೆತ್ತಿ ಬೈತಲೆ'ಯನ್ನಿಟ್ಟು ಅದನ್ನು ಚಿನ್ನದ ಸರಪಳಿಯಿಂದ ಕೂದಲಿಗೆ ಬಿಗಿಯಲಾಗುತ್ತಿತ್ತು. ಅಲಂಕರಿಸಿದ ಗೋಲಾಕಾರದ ಜೋತಾಡುವ ಪದಕ ರತ್ನಖಚಿತವಾಗಿರುತಿತ್ತು (ಕೆಲವು ಸಂಧರ್ಭಗಳಲ್ಲಿ ಕೃತಕವಾದುದು). ಕಿವಿಗೆ 'ಬೆಂಡೋಲೆ', 'ಬುಗುಡಿ' (ಕೂದಲಿಗೆ ಚುಚ್ಚುವ 'ಪಿನ್ನು') ಮುತ್ತಿನ 'ಕೊಪ್ಪು' ತೊಡುತ್ತಿದ್ದರು. ಮೂಗಿಗೆ ಮೂಗುತಿ ಇಲ್ಲವೆ 'ಬೊಟ್ಟು' ಇಡುತ್ತಿದ್ದರು. ಕೊರಳಿಗೆ 'ಬಜಿಲುಸರ', 'ಚಕ್ರಸರ' ಮುಂತಾದ ವಿಶಿಷ್ಟ ತರದ ಚಿನ್ನದ ಸರಗಳನ್ನು ತೊಡುತ್ತಿದ್ದರು. ಮುಂಗೈಗೆ 'ತೋಳಬಂದಿ' ತೊಡಿಸಲಾಗುತ್ತಿತ್ತು. ಹಲವು ತರದ ಗಾಜಿನ ಬಳೆಗಳನ್ನು ತೊಡಿಸುತ್ತಿದ್ದರು. ಬೆರಳಿಗೆ ಚಿನ್ನದ ಉಂಗುರ, ಕಾಲಿಗೆ ಬೆಳ್ಳಿಯ ಗೆಜ್ಜೆ ಮತ್ತು ಕಾಲ್ಬೆರಳಲ್ಲಿ ಮದುವೆಯಾದ ಹೆಂಗಸು ಅನ್ನುವುದರ ಸಂಕೇತವಾಗಿ ಬೆಳ್ಳಿಯ ಉಂಗುರ ಇರುತಿತ್ತು. ಕಣ್ಣಿಗೆ 'ಕಾಡಿಗೆ' (ಮನೆಯಲ್ಲಿಯೇ ತಯಾರಿಸಿದ್ದು) ಹಚ್ಚುತ್ತಿದ್ದರು. ಹೆಂಗಸರು ಹೆಚ್ಚಾಗಿ ಬಯಸುವ ಬನಾರಸಿ ಸೀರೆ ಮತ್ತು ಸೊಂಟಕ್ಕೆ 'ಸೊಂಟ ಪಟ್ಟಿ' ಅವಶ್ಯಕವಾಗಿತ್ತು. ಕೂದಲನ್ನು ಅಂದವಾಗಿ ಬಾಚಿ ಮಲ್ಲಿಗೆ ಹೂವಿನಿಂದ (ಮಂಗಳೂರಿನ ವಿಶೇಷತೆ) ಕೂದಲು ಮುಚ್ಚಿ ಹೋಗುವಂತೆ ಮುಚ್ಚುತ್ತಿದ್ದರು. ಇದಕ್ಕೆ 'ಜಲ್ಲಿಹಾಕುವುದು' ಅನ್ನುತ್ತಾರೆ. ಇಂದು ಇದು ಅಪರೂಪವಾಗಿ ಬಿಟ್ಟಿದೆ.

**ಮದುಮಗನ ವೇಷಭೂಷಣ**

ಮದುಮಗನ ಕಿವಿಗೆ 'ಒಂಟಿ' ಅಥವಾ 'ಟಿಕ್ಕಿ', ಕೊರಳಿಗೆ ಚಿನ್ನದ ಸರ, ಬೆರಳಿಗೆ ಚಿನ್ನದ ಉಂಗುರ ಮತ್ತು ಕಾಲ್ಬೆರಳಿಗೆ ಬೆಳ್ಳಿಯ ಉಂಗುರ ತೊಡಿಸಲಾಗುತ್ತಿತ್ತು. ಮದುಮಗ ಅಂಗಿ, ಕಚ್ಚೆ ಉಟ್ಟು ಮತ್ತು ಪೇಟ (ಗಾಂಧಿಟೋಪಿ) ಧರಿಸಿ ಹೆಗಲಲ್ಲಿ ಶಾಲು ಧರಿಸುತ್ತಾನೆ.

**ಒಂದು ವಿಶೇಷ ಪದ್ಧತಿ**

ಮದುಮಗ ಮತ್ತು ಮದುಮಗಳು ಇಬ್ಬರು ಒಂದು ಸಣ್ಣ 'ಕಿನ್ನಿಕತ್ತಿ' (ಕಿಂಕಿಣಿ ಶಬ್ದ ಮಾಡುವ ಗೆಜ್ಜೆ ಇದ್ದ 'ಗೆಜ್ಜತ್ತಿ'), ಸ್ವಲ್ಪ ವೀಳ್ಯದೆಲೆ ಮತ್ತು ಅಡಿಕೆಯನ್ನು ಮದುವೆ ಸಮಾರಂಭ ಪೂರ್ಣಗೊಳ್ಳುವ ತನಕ ಕೈಯಲ್ಲಿ ಹಿಡಿದಿರುತ್ತಾರೆ. ಮದುಮಗನಿಗೆ ಅವನ ಭಾವ ಮತ್ತು ಮದುಮಗಳಿಗೆ ಅವಳ ಅತ್ತಿಗೆ ಮದುವೆಯ ಕಾರ್ಯಕ್ರಮದ ಮಾರ್ಗದರ್ಶನ ಮಾಡುತ್ತಾರೆ. ಅವರಿಗೆ ಇದೊಂದು ಗೌರವವಾಗಿರುತ್ತದೆ.

**ಮದುವೆಯ ಮೆರವಣಿಗೆ 'ದಿಬ್ಬಣ'**

ಸಾಮಾನ್ಯವಾಗಿ ಮದುವೆ ಮದುಮಗನ ಮನೆಯಲ್ಲಿ ನಡೆಯುತಿತ್ತು. ದಿಬ್ಬಣದಲ್ಲಿ (ಮದುವೆ ಗುಂಪು) ಸಾಧಾರಣ ನಾದಸ್ವರದ ಭಾರಿಸುವಿಕೆ ಮತ್ತು ಸ್ಥಳೀಯ 'ಬ್ಯಾಂಡು' ಇಲ್ಲವೆ ಪೂರ್ಣ 'ಬ್ಯಾಂಡು' ಮತ್ತು 'ಬೆಡಿ-ಗರ್ನಾಲು' ಮುಂತಾದ ಸಿಡಿಮದ್ದುಗಳು ಇರುತ್ತಿದ್ದವು. ಕೆಲವೊಮ್ಮೆ 'ತಾಲೀಮಿನವರು' (ವ್ಯಾಯಾಮ ಪಟುಗಳು) ಕೂಡಾ ದಿಬ್ಬಣದಲ್ಲಿ ಭಾಗವಹಿಸುತಿದ್ದರು. ಹಿಂದಿನ ಕಾಲದಲ್ಲಿ ದಿಬ್ಬಣದವರು ಕಾಲ್ನಡಿಗೆಯಲ್ಲಿ ಹೋಗುತ್ತಿದ್ದು ಕರಾವಳಿ ಪ್ರದೇಶದಲ್ಲಿ ಜನವಸತಿ ಕಡಿಮೆಯಾಗಿ ನಿರ್ಜನವಾಗಿದ್ದುದರಿಂದ ಮದುಮಗಳ ಆಭರಣಗಳ ರಕ್ಷಣೆಗಾಗಿ 'ತಾಲೀಮಿನವರು' ಜೊತೆಯಲ್ಲಿ ಹೋಗುತ್ತಿದ್ದರು. ಈ ಆಭರಣಗಳನ್ನು ಗ್ರಾಮಸಭೆಯವರು ಕೊಡುತ್ತಿದ್ದುದರಿಂದ ಮದುವೆಯ ದಿಬ್ಬಣ ಮದುವೆಯಾಗಿ ಹಿಂತಿರುಗಿ ಬಂದು ಮನೆ ಸೇರುವ ತನಕದ ಜವಾಬ್ದಾರಿ ಗ್ರಾಮಸಭೆಗಳು ಕಳುಹಿಸಿದ ಈ 20/25 ಮಂದಿ 'ತಾಲೀಮಿನವರ' ಮತ್ತು ಗ್ರಾಮಸ್ಥರದ್ದಾಗಿರುತ್ತಿತ್ತು.

**ದಿಬ್ಬಣದ ಸ್ವಾಗತ ('ಎದುಕೊನ್ನು')**

ದಿಬ್ಬಣದ ಆಗಮನವಾದಾಗ ಸ್ವಾಗತ ಸಮಾರಂಭ ಮಂಟಪದ ಹೊರಗೆ ನಡೆಯುತ್ತಿತ್ತು. ಬಂದವರಿಗೆ ಬೆಲ್ಲ ನೀರು, ಎಲೆಅಡಿಕೆ ಕೊಡುತ್ತಿದ್ದರು. ಮದುಮಗ ಮದುಮಗಳಿಗೆ ಸ್ವಲ್ಪ ಹಣವನ್ನು ಉಡುಗೊರೆಯಾಗಿ ಕೊಡುವ ಸಂಪ್ರದಾಯವಿತ್ತು. ಇದಕ್ಕೆ 'ನೆಚ್ಚಿಕಟ್ಟುನು' ಅನ್ನುತ್ತಾರೆ. ಇದು ಒಂದು ವಿಧದ ವಧುದಕ್ಷಿಣೆ ಅನ್ನಬಹುದು. ಆದರೆ ವರದಕ್ಷಿಣೆ ನಿಷಿದ್ಧವಾಗಿತ್ತು.

**ಮದುವೆ ಸಮಾರಂಭ**

ದಿಬ್ಬಣದ ಆಗಮನವಾಗಿ, ಸ್ವಾಗತ ಸಮಾರಂಭದ ಬಳಿಕ, ಮದುಮಕ್ಕಳು ಮಲ್ಲಿಗೆಯ ಹಾರವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ. ಆಮೇಲೆ ಮದುಮಗಳ ಸೋದರಮಾವ ಅಥವಾ ಊರಿನ ಗುರಿಕಾರ ವಧುವಿನ ಕೈಯನ್ನು ವರನ ಕೈಯಲ್ಲಿ ಇಡುತ್ತಾರೆ. ಆನಂತರ, ಧಾರೆ ಎರೆಯುವ ಅಂದರೆ, ಪವಿತ್ರ ಜಲವನ್ನು ವಧೂ-ವರರ ಕೈ ಮೇಲೆ ಹೊಯ್ಯುವ ಕ್ರಮ. ಧಾರೆಯನ್ನು ಮದುಮಗಳ ತಾಯ್ತಂದೆಯರು ಮಾಡಿದರೆ, ಧಾರೆಯೆರೆದ ನೀರನ್ನು ತಟ್ಟೆಯಲ್ಲಿ ಹಿಡಿಯುವುದನ್ನು ಮದುಮಗನ ತಾಯ್ತಂದೆಯರು ಮಾಡುತ್ತಾರೆ. ಗ್ರಾಮದ ಗುರಿಕಾರ, ಗ್ರಾಮದ ಮಡಿವಾಳನ ಸಹಾಯದಿಂದ ಮದುವೆ ಕಾರ್ಯವನ್ನು ನೆರವೇರುತ್ತಿತ್ತು. ಆಂದಿನ ದಿನಗಳಲ್ಲಿ ಕಾರ್ಯಕ್ರಮದ ಘೋಷಣೆಯ ಕರ್ತವ್ಯವನ್ನು ಅದಕ್ಕಾಗಿ ನೇಮಿಸಲಾದ ವ್ಯಕ್ತಿಯು ಮಾಡುತ್ತಾನೆ. ಆಮಂತ್ರಿತ ಅತಿಥಿಗಳಿಗೆ ಮದುವೆ ಕಾರ್ಯಕಲಾಪಗಳನ್ನು ಆರಂಭದಲ್ಲೇ ಘೋಷಣೆ ಮೂಲಕ

ತಿಳಿಸುವುದು ವಾಡಿಕೆ. ಉದಾಹರಣೆಗೆ ಧಾರೆ ಎರೆಯುವ ಮೊದಲೇ 'ಧಾರೆ ಮೈಪುನು ಪನ್ವೆರ್'ಎಂದು ಕೂಗಿ ಹೇಳುತ್ತಾನೆ. ಅತಿಥಿಗಳು ಒಳ್ಳೆಯದಾಗಲಿ ('ಎಡ್ಡೆಪನ್ವೆರು') ಎಂದು ಪ್ರತಿಧ್ವನಿ ಎತ್ತುತ್ತಾರೆ. ಅತಿಥಿಗಳು ಇತ್ತ ಉಡುಗೊರೆಗಳನ್ನು ಘೋಷಿಸಿ ನಮೂದಿಸಿಕೊಳ್ಳಲಾಗುತ್ತದೆ. ಮುಂದಿನ ದಿನಗಳಲ್ಲಿ, ಉಡುಗೊರೆ ನೀಡಿದವರ ಕುಟುಂಬದ ಸದಸ್ಯರ ಮದುವೆ ನೆರವೇರಿದರೆ ಆ ಸಂದರ್ಭದಲ್ಲಿ ಹಿಂತಿರುಗಿಸುವ ಪದ್ಧತಿ ಇದೆ. ಮದುವೆ ಸಮಾರಂಭದಲ್ಲಿ ಸಸ್ಯಾಹಾರಿ ಭೋಜನವಿರುತ್ತಿತ್ತು.

**ಮದುವೆಯ ವ್ಯವಸ್ಥೆ**

ಮದುವೆಯ ದಿನದಂದು ಇಡೀ ಗ್ರಾಮಕ್ಕೆ ಊಟದ ಆಮಂತ್ರಣವಿದ್ದರೆ ಅದನ್ನು 'ಊರಿಗೆ ಊಟ' ('ಊರುಗು ವೊಣಸು') ಎನ್ನುತ್ತಿದ್ದರು. ಆ ಸಂದರ್ಭದಲ್ಲಿ ಅಡುಗೆ ಮಾಡುವ ಮತ್ತು ಬಡಿಸುವ ಕಾರ್ಯ ಗ್ರಾಮದವರ ಜವಾಬ್ದಾರಿ. ಕೆಲವು ಸಂದರ್ಭಗಳಲ್ಲಿ ಪ್ರತಿಯೊಂದು ಮನೆಯಿಂದ ಒಬ್ಬ ಗಂಡಸು ಮತ್ತು ಒಬ್ಬಳು ಹೆಂಗಸನ್ನು ಆಮಂತ್ರಿಸಲಾಗುತ್ತಿತ್ತು.

**ನವ""ವ""ಧುವಿನ ಆಗಮನ ('ಪೊಸ ಮದ್ಮಲ್ ಬರ್ಪಿನಿ')**

ಮದುವೆ ಸಮಾರಂಭ ಮುಗಿದ ಬಳಿಕ ಸಾಮಾನ್ಯವಾಗಿ ಮದುಮಗಳು ತನ್ನ ತಾಯಿ ತಂದೆಯರ ಮನೆಗೆ ಹಿಂತಿರುಗಿ ಹೋಗುತ್ತಾಳೆ. ಆ ಬಳಿಕ ಒಂದು ನಿರ್ಧಾರಿತ ದಿನದಂದು ಮದುಮಗಳು ಮದುಮಗನ ಮನೆಗೆ ಬರುವುದನ್ನು ಹೊಸ ಮದುಮಗಳ ಆಗಮನ ('ಪೊಸ ಮದ್ಮಲ್ ಬರ್ಪಿನಿ') ಎಂದು ಹೇಳುತ್ತಾರೆ. ಆಗ ನಡೆಯುವ ಭೋಜನ ಸಮಾರಂಭದಲ್ಲಿ ಮಾಂಸಾಹಾರಿ ಭೋಜನವಲ್ಲದೆ ಸಿಹಿತಿಂಡಿ, ಬೆಲ್ಲ ಹಾಕಿದ ಅವಲಕ್ಕಿ ಮತ್ತು ಬಾಳೆಹಣ್ಣುಗಳನ್ನು ಬಡಿಸುತ್ತಾರೆ. ಮದುಮಗಳ ಅತ್ತೆ ಬಡಿಸುವ ಊಟಕ್ಕೆ ಅತ್ತೆ ಬಡಿಸುವುದು ('ಮಾಮಿ ಬಳಸುನು') ಅನ್ನುತ್ತಾರೆ. ಮದುಮಗಳನ್ನು ಅತ್ತೆ, ಅತ್ತೆಯ ಸಹೋದರಿಯರಿಗೂ, ಅವಳ ಮಾವನಿಗೂ ಮತ್ತು ಮದುಮಗನ ಹಿರಿಯ ಸಹೋದರರ ಪರಿಚಯ ಮಾಡಿಕೊಟ್ಟು ಇನ್ನು ಮುಂದೆ ಅವರನ್ನು ಅವರ ಹೆಸರೆತ್ತಿ ಕರೆಯಬಾರದೆಂದು ತಿಳಿಸಿಹೇಳಲಾಗುತ್ತದೆ.

**ಮದುಮಗಳ ಮನೆಗೆ ಮದುಮಗನ ಆಗಮನ ('ತೊಡಮನೆ ಪೋಪಿನಿ')**

ಮದುಮಗ ಪ್ರಥಮ ಬಾರಿ ಮದುಮಗಳ ಮನೆಗೆ ಭೇಟಿ ಮಾಡುವುದನ್ನು 'ತೊಡಮನೆ ಪೋಪಿನಿ' ಎಂದು ಹೇಳುತ್ತಾರೆ. ಆಗ ನಡೆಯುವ ಭೋಜನ ಸಮಾರಂಭ ಮೇಲಿನಂತೆಯೇ ಇರುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ ಮದುಮಗನ ಅತ್ತೆ ಊಟಕ್ಕೆ ಮೊದಲು ಚಿನ್ನದ ಉಂಗುರ ಅಥವಾ ಸರವನ್ನು ಉಡುಗೊರೆಯಾಗಿ ಕೊಡುವ ವಾಡಿಕೆ ಇದೆ. ಮದುಮಗ ತನ್ನ ಅತ್ತೆ ಮತ್ತು ಮಾವನನ್ನು ಅವರ ಹೆಸರೆತ್ತಿ ಕರೆಯುವುದಿಲ್ಲ.

**ಸೀಮಂತ ಸಮಾರಂಭ ('ಬಯಕೆ ಪಾಡುನು')**

ಪ್ರಥಮ ಗರ್ಭಿಣಿಯಾದಾಗ ನಡೆಸುವ ಸೀಮಂತ ಉಪಚಾರಕ್ಕೆ ('ಬಯಕೆ ಪಾಡುನು') ಅನ್ನುತ್ತಾರೆ. ಇಡ್ನು ಗಂಡನ ಮನೆಯಲ್ಲಿ ನೆರವೇರಿಸಲಾಗುತ್ತದೆ. ಆಗ ಗರ್ಭಿಣಿಯನ್ನು ಮದುಮಗಳಂತೆ ಸಿಂಗರಿಸುತ್ತಾರೆ. ಭೋಜನದಲ್ಲಿ ಕಡಿಮೆ ಪಕ್ಷ ಐದು ತರದ ಸಿಹಿ ತಿಂಡಿ ಬಡಿಸುತ್ತಿದ್ದರು. ಮಗುವಿನ ಲಿಂಗ ಕಂಡುಕೊಳ್ಳುವ ಸವಲತ್ತು ಇಲ್ಲದ ಹಿಂದಿನ ಕಾಲದಲ್ಲಿ, ಗರ್ಭಿಣಿಯಾದವಳು ತನಗೆ ಬಡಿಸಿದ ಬೇಯಿಸಿದ ಮೊಟ್ಟೆಗಳನ್ನು ತನ್ನ ಇಚ್ಛೆ ಪ್ರಕಾರ ಗಂಡು ಯಾ ಹೆಣ್ಣು ಮಕ್ಕಳಿಗೆ ತಿನ್ನಲು

ಕೊಡುವ ಸಾಂಪ್ರದಾಯವಿತ್ತು. ಸಸ್ಯಹಾರಿ ಪದಾರ್ಥಗಳಲ್ಲಿ ಅಕ್ಕಿ ಹಿಟ್ಟಿನಲ್ಲಿ ಹುರಿದ ನುಗ್ಗೆಸೊಪ್ಪು (ಅದರಲ್ಲಿ ಪೌಷ್ಟಿಕಾಂಶ ಮತ್ತು ಮದ್ದಿನಾಂಶ ಇರುವುದರಿಂದ) ಅವಶ್ಯಕವಾಗಿ ಬಡಿಸುತ್ತಿದ್ದರು. ಅತ್ತೆ ಹೊಸ ಸೀರೆ ಮತ್ತು ಆಭರಣಗಳನ್ನು ಗರ್ಭಿಣಿಗೆ ಕೊಟ್ಟು, ಒಂದು ಲೋಟ ಹಾಲು ಕೊಟ್ಟು ಗರ್ಭಿಣಿಯನ್ನು ಊಟಮಾಡಲು ಹೇಳುವುದು ಪದ್ಧತಿ. ಈ ಸಮಾರಂಭ ಅತ್ತೆಯ ಮೇಲ್ವಿಚಾರಣೆಯಲ್ಲಿ ಮತ್ತು ಇತರ ಊರ ಹಿರಿಯ ಹೆಂಗಸರ ಸಹಾಯದಿಂದ ನಡೆಯುತ್ತದೆ. ಅದೇ ದಿನ ಗರ್ಭಿಣಿಯನ್ನು ಅವಳ ತವರು ಮನೆಗೆ ಕಳುಹಿಸಿಕೊಡುವ ರಿವಾಜು ಇದೆ. ಮೊದಲ ಮಗುವಿನ ಜನನ ಅವಳ ತವರು ಮನೆಯಲ್ಲೇ ಆಗುತ್ತಿತ್ತು.

**ಮದುವೆಯ ವಿಚ್ಛೇದನ**

ಮದುವೆಯ ವಿಚ್ಛೇದನ ಸುಲಭವಾಗಿರಲಿಲ್ಲ. ಆದರೂ ವಿಪರೀತ ಪರಿಸ್ಥಿತಿಗಳಲ್ಲಿ ವಿವಾಹ ವಿಚ್ಛೇದನೆಯ ಹೇಳಿಕೆ ('ಬರಪನ್ಪಿನಿ') ನೀಡಿ ಗಂಡನಾದವನು ವಿಚ್ಛೇದನ ಮಾಡಬಹುದಿತ್ತು. ಅದೇ ರೀತಿ ಹೆಂಡತಿಯ ಪಾಲಕರು ಅವಳ ಮದುವೆ ವಿಚ್ಛೇದನ ಬಯಸುತ್ತಾಳೆ ಎಂದು ಕಾರಣ ಸಹಿತ ಗಂಡನಿಗೆ ತಿಳಿಸಿ ವಿಚ್ಛೇದನ ಪಡೆಯಬಹುದಿತ್ತು. ಒಂದು ವೇಳೆ ಇದರ ಬಗ್ಗೆ ವ್ಯಾಜ್ಯ ಉಂಟಾದರೆ ಅವರ ಗ್ರಾಮಸಭೆಗಳು ಈ ಕುರಿತು ವಿಚಾರಣೆ ಮಾಡಿ ನಿರ್ಧಾರಕ್ಕೆ ಬರುತ್ತಾರೆ. ವಿಚ್ಛೇದನಕ್ಕೆ ಒಪ್ಪಿಗೆ ದೊರೆತರೆ, ಮರುಮದುವೆ ಮಾಡಿಕೊಳ್ಳಬಹುದು. ವಿಧವೆ ಕೂಡಾ ಪುರ್ನವಿವಾಹಕ್ಕೆ ಅರ್ಹಳಾಗಿರುತ್ತಾಳೆ.

**ವಿಧವೆ/ವಿಧುರರ ಪುನರ್ವಿವಾಹ**

ವಿಧವೆಯರ ಮತ್ತು ವಿಧುರರ ಪುನರ್ವಿವಾಹ ಸಾಮಾನ್ಯವಾಗಿ ರಾತ್ರಿ ಹೊತ್ತಿನಲ್ಲಿ ನಡೆಯುತ್ತಿತ್ತು. ಈ ವಿವಾಹ ಸಮಾರಂಭದಲ್ಲಿ ಮಾಂಸಾಹಾರಿ ಊಟ ಬಡಿಸುವುದಕ್ಕೆ ಅಭ್ಯಂತರವಿರಲಿಲ್ಲ. ಪುನರ್ವಿವಾಹಕ್ಕೆ 'ಬಿಡದಾರೆ' ('ಬುಡುದಾರೆ') ಅನ್ನುತ್ತಿದ್ದರು. ಈ ಮದುವೆ ಸಾಮಾನ್ಯವಾಗಿ ಮದುಮಗಳ ಮನೆಯಲ್ಲಿ ಗುರಿಕಾರರ ಮೇಲ್ವಿಚಾರಣೆಯಲ್ಲಿ ನಡೆಯುತ್ತಿತ್ತು.

**ಹೆರಿಗೆ**

ಮಗುವಿನ ಹೆರಿಗೆಗಾಗಿ ಆಸ್ಪತ್ರೆಗೆ ಹೋಗುವುದು ಅಪರೂಪವಾಗಿತ್ತು. ಗ್ರಾಮದ ದಾಯಿ ('ಪದೆತಿ') ಮತ್ತು ಇತರ ಹಿರಿಯ ಹೆಂಗಸರ ಸಹಾಯದಿಂದ ಮನೆಯಲ್ಲೇ ಹೆರಿಗೆಯಾಗುತ್ತಿತ್ತು. ಮಗು ಹುಟ್ಟಿದ ಬಳಿಕ ಹೆರಿಗೆ ಸುರಕ್ಷಿತವಾಗಿ ಆಯಿತೆಂದು ಹೆರಿಗೆ ಕೋಣೆಯ ಹೊರಗೆ ಕಾಯುತ್ತಿದ್ದವರಿಗೆ ತಿಳಿಸಲಿಕ್ಕಾಗಿ ಗಂಟೆ (ಬಟ್ಟಲು) ಬಾರಿಸುತ್ತಿದ್ದರು.

**ಮಗುವಿನ ಜನನ (ಸೂತಕ)**

ಮಗು ಹುಟ್ಟಿದ ಬಳಿಕ 12 ದಿನಗಳ ತನಕ ತಾಯಿಯ ಕುಟುಂಬದವರು ಸೂತಕ ('ಅಮೆ') ಪಾಲಿಸುತ್ತಾರೆ. ಆ ಕಾಲದಲ್ಲಿ ಅವರು ದೇವಾಲಯಗಳಿಗೆ ಹೋಗುವುದಿಲ್ಲ. ಅಳಿಯಸಂತಾನಕಟ್ಟನ್ನು ಪಾಲಿಸುವುದರಿಂದ ಮಗುವಿನ ತಂದೆಯ ಕುಟುಂಬದಲ್ಲಿ ತಂದೆಯೊಬ್ಬನೇ ಈ ನಿರ್ಬಂಧವನ್ನು ಪಾಲಿಸುತ್ತಾನೆ. ಒಂದು ತಿಂಗಳು ಪೂರ್ಣವಾದ ಬಳಿಕ ತಾಯಿ ಮತ್ತು ಮಗು ಸಾಂಪ್ರದಾಯಿಕವಾಗಿ ದೇವಾಲಯಕ್ಕೆ ಹೋಗಿ ಪ್ರಾರ್ಥನೆ ಸಲ್ಲಿಸುತ್ತಾರೆ.

**ಬಾಣಂತಿಯ ಆರೈಕೆ ('ಪೆದ್ಮೆದಿ ತಾಂಕುನು')**

ಹೊಸತಾಗಿ ತಾಯಿಯಾದವಳಿಗೆ ಮತ್ತು ಅವಳ ಮಗುವಿಗೆ ಎಣ್ಣೆ ಹಚ್ಚಿ ಬಿಸಿನೀರಿನ ಸ್ನಾನ ಪ್ರತಿದಿನ ಸುಮಾರು ಒಂದು ತಿಂಗಳವರೆಗೆ ಮಾಡಲಾಗುತ್ತದೆ. ಇದಲ್ಲದೆ ವಿಶೇಷ ತರದ ಆಹಾರ, ಪಲದೆ', ಕಷಾಯ, ಲೇಹ (ಆರಿಸಿದ ಪೌಷ್ಟಿಕ ವಸ್ತುಗಳಿಂದ ತಯಾರಿಸಿದ್ದು) ಕೊಡುತ್ತಾರೆ. ಆಯ್ದ ಹಾನಿಕರವಲ್ಲದ 'ಕಾಣೆ', 'ಬೊಲಿಂಜಿರ್' ಇತ್ಯಾದಿ ಮೀನುಗಳ ಪದಾರ್ಥವನ್ನು ಕೊಡುತ್ತಾರೆ.

**ಮಗುವನ್ನು ತೊಟ್ಟಿಲಿಗೆ ಹಾಕುವುದು ('ತೊಟ್ಟಿಲು ಪಾಡುನು')**

ಹುಟ್ಟಿದ 12ನೆಯ ದಿನ ಮಗುವನ್ನು ತೊಟ್ಟಿಲಿಗೆ ಹಾಕುವ ಸಮಾರಂಭ ನಡೆಯುತ್ತದೆ. ಪ್ರಾಯದ ಹೆಂಗಸರು ಆಗ ಶೋಭಾನೆ ಹಾಡಿ ಮಗುವನ್ನು ಹರಸುತ್ತಾರೆ. ಸಿಹಿ ತಿಂಡಿ ಮತ್ತು ಇತರ ತಿನಿಸುಗಳನ್ನು ಹಂಚುತ್ತಾರೆ. ಆ ಸಂದರ್ಭ ಊಟದ ವ್ಯವಸ್ಥೆ ಕೂಡ ಇರುವುದುಂಟು. ಹತ್ತಿರದ ಕೆಲವು ಸಂಬಂಧಿಕರು ಮಗುವಿಗೆ ಉಡುಗೊರೆ ಕೊಡುತ್ತಾರೆ.

**ಪೌಷ್ಟಿಕ ಆಹಾರ ಸರಬರಾಜು ('ಸನ್ನಾಯಿ ಕೊನೊಪಿನಿ')**

ಸಾಮಾನ್ಯವಾಗಿ ಮಗುವಿನ ಜನನ ತಾಯಿಯ ತವರು ಮನೆಯಲ್ಲಿ ಆಗುತ್ತದೆ. ಮಗು ಹುಟ್ಟಿದ ಬಳಿಕ ತಂದೆಯ ಮನೆಯವರು ಕೆಲವು ತರದ ಪೌಷ್ಟಿಕ ಆಹಾರಗಳನ್ನು ಮತ್ತು ಉಡುಗೊರೆಗಳನ್ನು ಕಳುಹಿಸಿಕೊಡುತ್ತಾರೆ. ಇದಕ್ಕೆ 'ಸನ್ನಾಯಿ ಕೊನೊಪಿನಿ' ಅನ್ನುತ್ತಾರೆ.

**ತಂದೆಯ ಮನೆಗೆ ಮಗುವಿನ ಆಗಮನ ('ತೊಟ್ಲಲೆ ಪೋಪಿನಿ')**

ಸಾಮಾನ್ಯವಾಗಿ ಮಗುವಿನ ಜನನ ತಾಯಿಯ ತವರು ಮನೆಯಲ್ಲಿ ಆಗುತ್ತದೆ. ಆ ಬಳಿಕ ಮಗುವನ್ನು ತಂದೆಯ ಮನೆಗೆ ಕರೆದುಕೊಂಡು ಹೋಗುವ ಸಮಾರಂಭಕ್ಕೆ ತುಳು ಭಾಷೆಯಲ್ಲಿ 'ತೊಟ್ಲಲೆ ಪೋಪಿನಿ' ಅನ್ನುತ್ತಾರೆ.

**ಅಂತ್ಯ ಸಂಸ್ಕಾರ**

**ಸಾವಿನ ದಿವಸದ ಆಚರಣೆಗಳು**

ಶವದ ತಲೆ ದಕ್ಷಿಣ ದಿಕ್ಕಿಗೆ ಇರುವಂತೆ ನೆಲದ ಮೇಲೆ ಮಲಗಿಸಿ, ಅದಕ್ಕೆ ಬಿಳಿ ಬಟ್ಟೆಯನ್ನು ಹೊದಿಸುತ್ತಾರೆ. ಅದರ ಎರಡೂ ಕೈಗಳನ್ನು ಎದೆಯ ಮೇಲಿಟ್ಟು ಬೆರಳುಗಳನ್ನು ಬಿಗಿದು ಕಟ್ಟುತ್ತಾರೆ. ಹಾಗೆಯೇ, ಎರಡು ಕಾಲುಗಳ ಹೆಬ್ಬೆರಳುಗಳನ್ನು ಕಟ್ಟುತ್ತಾರೆ. ದೇಹದ ಸಮತೂಕ ತಪ್ಪಬಾರದೆಂದು ಹೀಗೆ ಮಾಡುತ್ತಾರೆ. ಬಳಿಕ ತೆಂಗಿನಕಾಯಿಯನ್ನು ಎರಡು ಹೋಳಾಗುವಂತೆ ಒಡೆದು ಅವುಗಳಲ್ಲಿ ಎಣ್ಣೆ ಹೊಯ್ದು ದೀಪ ಹಚ್ಚಿ ತಲೆ ಮತ್ತು ಕಾಲ ಬುಡದಲ್ಲಿ ಅಕ್ಕಿಯ ರಾಶಿಯ ಮೇಲೆ ಇಡುತ್ತಾರೆ. ಹಾಗೆಯೇ ಎರಡೂ ಕಡೆ ಊದುಬತ್ತಿಗಳನ್ನು ಹಚ್ಚಿ ಇಡುತ್ತಾರೆ. ಬಹುಶಃ ದುರ್ಗಂಧವಿದ್ದರೆ ದೂರವಾಗಲಿ ಎಂದಿರಬೇಕು.

## ಅಂತ್ಯ ಸಂಸ್ಕಾರದ ಏರ್ಪಾಡು

ಸಾವು ಉಂಟಾದ ಸುದ್ದಿಯನ್ನು ಗ್ರಾಮದ ಎಲ್ಲಾ ಕುಟುಂಬಗಳಿಗೆ ತಿಳಿಸುತ್ತಾರೆ. ಪ್ರತಿಯೊಂದು ಕುಟುಂಬದಿಂದ ಒಬ್ಬನಾದರೂ ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಲು ಬರುತ್ತಾರೆ. ಅಂತ್ಯಕ್ರಿಯೆಗೆ ಚಿತೆಯನ್ನು ಸಿದ್ಧಗೊಳಿಸುವ ಮತ್ತು ಇತರ ಎಲ್ಲಾ ಶವ ಸಂಸ್ಕಾರ ಸಂಬಂಧಿತ ವ್ಯವಸ್ಥೆಗಳನ್ನು ಮಾಡುವ ಜವಾಬ್ದಾರಿಕೆ ಗ್ರಾಮಸ್ಥರದ್ದು. ಊರಿನ ಗುರಿಕಾರರು ಮತ್ತು ಗ್ರಾಮದ ಮಡಿವಾಳ ಅದನ್ನು ನಿಭಾಯಿಸುತ್ತಾರೆ. ಗ್ರಾಮದ ಭಜನಾ ಮಂಡಳಿ ಸಾಮಾನ್ಯವಾಗಿ ಅಂತ್ಯ ಸಂಸ್ಕಾರಕ್ಕೆ ಮೊದಲು ಮತ್ತು ಅಂತ್ಯ ಸಂಸ್ಕಾರದ ವೇಳೆ ಭಜನೆ ಮಾಡುತ್ತಾರೆ. ಕೆಲವು ಗ್ರಾಮಗಳಲ್ಲಿ ಅಂತ್ಯ ಸಂಸ್ಕಾರಕ್ಕೆ ಬೇಕಾಗುವ ಕಟ್ಟಿಗೆಗಳನ್ನು ಗ್ರಾಮಸಭೆ ಧರ್ಮಾರ್ಥವಾಗಿ ಒದಗಿಸುತ್ತದೆ. ಇನ್ನು ಕೆಲವು ಕಡೆ ಗ್ರಾಮಸಭೆಗಳು ಅಂತ್ಯಸಂಸ್ಕಾರದ ವೆಚ್ಚಕ್ಕೆ ಬೇಕಾಗುವ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಗ್ರಾಮಸಭೆ ಪರಿಸ್ಥಿತಿಯನ್ನು ತನ್ನ ಹತೋಟಿಯಲ್ಲಿಟ್ಟುಕೊಂಡು ಎಲ್ಲಾ ಸಂಸ್ಕಾರಗಳು ಮುಗಿಯುವ ತನಕ ವಿಯೋಗಕ್ಕೆ ತುತ್ತಾದ ಕುಟುಂಬಕ್ಕೆ ಸಹಾಯ ಮಾಡುತ್ತದೆ.

## ಶವದ ಸ್ನಾನ

ಅಂತ್ಯಕ್ರಿಯೆಗೆ ಮೊದಲು, ಸಂಬಂಧಿಕರು ಶವಕ್ಕೆ ತೆಂಗಿನೆಣ್ಣೆಯಲ್ಲಿ ಕಲಸಿದ ಹಳದಿ ಹಚ್ಚಿ, ಬಳಿಕ ಬಿಸಿ ನೀರಿನಿಂದ ಸ್ನಾನ ಮಾಡಿಸುತ್ತಾರೆ. ಹಳ್ಳಿಗಳಲ್ಲಿ ಸ್ನಾನದ ವಿಧಿಯನ್ನು ತೆಂಗಿನ ಸೋಗೆಯ ಚಾಪೆಯ ಮೇಲೆ ಮಲಗಿಸಿ ಅಂಗಳದಲ್ಲಿ ಮಾಡುತ್ತಾರೆ. ಮುಂಬಯಿಯಂತಹ ಪ್ರದೇಶಗಳಲ್ಲಿ ಇದನ್ನು ಬಚ್ಚಲು ಕೋಣೆ ಅಥವಾ ದಿವಾನ ಕೋಣೆ ('ಹಾಲ್')ನಲ್ಲಿ ಮಾಡುತ್ತಾರೆ. ಶವಕ್ಕೆ ಸ್ನಾನ ಮಾಡಿಸಿ, ಬಿಳಿ ಬಟ್ಟೆಯಲ್ಲಿ ಸುತ್ತಿ ನೆಲದ ಮೇಲೆ ಮಲಗಿಸುತ್ತಾರೆ. ಮೃತನಾದ ವ್ಯಕ್ತಿ ಗಂಡಸಾದರೆ, ಅವನ ಹೆಂಡತಿ ತನ್ನ ಮಂಗಳಸೂತ್ರ ಮತ್ತು ಬಳೆಗಳನ್ನು ಶವದ ಮೇಲೆ ಇಡುವ ಪದ್ಧತಿ ಇದೆ. ಈಚೆಗೆ ಇದು ಸಂಬಂಧಿತ ಹೆಂಗಸಿನ ಸ್ವಇಚ್ಛೆಗೆ ಬಿಡಲಾಗಿದೆ. ಮೃತನ ಪತ್ನಿ ಗಂಡನ ಪಾರ್ಥಿವ ಶರೀರಕ್ಕೆ ತುಳಸಿಯ ಹಾರವನ್ನು ಹಾಕುವ ಕ್ರಮವಿದೆ. ಮೃತಗೊಂಡ ವ್ಯಕ್ತಿ ಹೆಂಗಸಾಗಿದ್ದು ಅವಳ ಗಂಡ ಜೀವಂತವಾಗಿದ್ದರೆ, ಅವನು ಹೆಂಡತಿಯ ಪಾರ್ಥಿವ ಶರೀರದ ಹಣೆಗೆ ಕುಂಕುಮವನ್ನಿಟ್ಟು ತುಳಸಿ ಹಾರವನ್ನು ಹಾಕುತ್ತಾನೆ. ಮದುವೆಯ ಸೀರೆ ಇದ್ದರೆ ಹೆಂಗಸಿನ ಪಾರ್ಥಿವ ಶರೀರಕ್ಕೆ ಆ ಸೀರೆಯನ್ನು ಉಡಿಸುತ್ತಾರೆ.

## ಮನೆಯಲ್ಲಿ ಅಂತಿಮ ಸಂಸ್ಕಾರ

ಕೊನೆಯಲ್ಲಿ ಸಂಬಂಧಿಕರು ಮತ್ತು ಹೆಂಗಸರು ಮೊದಲ್ಗೊಂಡು 'ತುಳಸಿನೀರನ್ನು' (ತುಳಸಿ ಗೆಲ್ಲನ್ನು ನೀರಿನಲ್ಲಿ ಮುಳುಗಿಸಿ) ಹೆಣದ ಬಾಯಿಗೆ ಬಿಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಗಂಗಾನದಿಯ ನೀರು ಇಲ್ಲವೆ ಎಳನೀರನ್ನು ಉಪಯೋಗಿಸುತ್ತಾರೆ. ಇದು ಮೃತನಾದ ವ್ಯಕ್ತಿಗೆ ಕುಟುಂಬದವರು ಕೊಡುವ ಕೊನೆಯ ನೀರು ಎಂದು ತಿಳಿಯಲಾಗುತ್ತದೆ. ಚಿಕ್ಕವರು ಹೆಣದ ಕಾಲ ಮುಟ್ಟಿ ನಮಸ್ಕರಿಸಿ ಸತ್ತವರ ಬಗ್ಗೆ ತಮ್ಮ ಗೌರವವನ್ನು ವ್ಯಕ್ತಪಡಿಸುತ್ತಾರೆ. ತುಳಸಿನೀರು ಕೊಡುವ ಈ ಕ್ರಮವನ್ನು ಮನೆಯ ಹೊರಗಡೆ ಮತ್ತು ಸ್ಮಶಾನ ಭೂಮಿಯಲ್ಲಿ ಕೂಡ ಬೇರೆ ಬೇರೆ ಗುಂಪಿನವರು ಮಾಡುತ್ತಾರೆ.

**ಅಂತಿಮ ಯಾತ್ರೆಯ ತಯಾರಿ**

ಶವವನ್ನು ಬಿದಿರಿನ ಕೋಲು ಮತ್ತು ಚಾಪೆಯಿಂದ ತಯಾರಿಸಿದ 'ಚಟ್ಟ'ದ ಮೇಲೆ ಇಡುತ್ತಾರೆ. ಶರೀರವನ್ನು ಕೆಳಗಿನಿಂದ ಮೇಲಿನ ತನಕ ಸ್ವಚ್ಛವಾದ ಬಿಳಿ ಬಟ್ಟೆಯಿಂದ ಸುತ್ತಿ ಇಡುತ್ತಾರೆ. ಸಂಬಂಧಿಕರು ಮತ್ತು ಸ್ನೇಹಿತರು ಹತ್ತಿಯ ಇಲ್ಲವೆ ರೇಷ್ಮೆಯ ಬಟ್ಟೆಯನ್ನು ಹೊದಿಸುತ್ತಾರೆ. ಆ ಬಳಿಕ ವಿವಿಧ ತರದ ಹೂಗಳನ್ನು ಶವದ ಮೇಲೆ ಹರಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಶುಭಕಾರಕ ಬಣ್ಣಗಳನ್ನು ಹೂಗಳ ಮೇಲೆ ಚೆಲ್ಲುತ್ತಾರೆ. ಇದಾದ ಬಳಿಕ ಸ್ಮಶಾನಕ್ಕೆ ಬರಲಾಗದವರು ಶವಕ್ಕೆ ತುಳಸಿ ನೀರು ಕೊಡುವ ಕ್ರಮ ನಡೆಯುತ್ತದೆ.

**ಶವಯಾತ್ರೆ**

ಮೃತನ ಗಂಡು ಮಕ್ಕಳು ಮತ್ತು ಅಳಿಯಂದಿರು 'ಚಟ್ಟ'ವನ್ನು ಎತ್ತಿ ಹಿಡಿದಾಗ ಹಿರಿಯ ಮಗ ಉರಿಯುತ್ತಿರುವ ಬೆಂಕಿಯ ಕುಡಿಕೆಯನ್ನು ಹಿಡಿದುಕೊಂಡು ಶವಯಾತ್ರೆ ಆರಂಭವಾಗುವುದು. ಕುಡಿಕೆಯಲ್ಲಿದ್ದ ಬೆಂಕಿಯನ್ನು ಸ್ಮಶಾನದಲ್ಲಿ ಚಿತೆ ಉರಿಸಲು ಉಪಯೋಗಿಸುವರು. ಮನೆಯಿಂದ ಹೊರಡುವಾಗ ಮತ್ತು ಸ್ಮಶಾನಕ್ಕೆ ಪ್ರವೇಶಿಸುವ ಮುನ್ನ ಒಂದು ತೆಂಗಿನಕಾಯಿಯನ್ನು ಹೆಣದ ಸುತ್ತ ಒಯ್ದು ಒಡೆದು ಹಾಕುವರು. ಹೆಣದ ಸುತ್ತ ದುಷ್ಟ ಶಕ್ತಿಗಳಿದ್ದರೆ ಅವುಗಳನ್ನುನಿವಾರಿಸಲಿಕ್ಕಾಗಿ ಈ ಕ್ರಮ. ಹೆಣವನ್ನು ಚಿತೆಯ ಪಕ್ಕ ಅಥವಾ ಚಿತೆಯ ಮೇಲೆ ಇಡುತ್ತಿದ್ದರು. ತುಳಸಿ ನೀರನ್ನು ಕೊಡದಿದ್ದವರು, ಅದನ್ನು ಇಲ್ಲಿ ಕೊಡಬಹುದು.

**ಸ್ಮಶಾನದಲ್ಲಿ ಆಚರಿಸುವ ವಿಧಿಗಳು**

ಸಾಕಷ್ಟು ಕಟ್ಟಿಗೆಗಳನ್ನಿಟ್ಟು ಚಿತೆಯನ್ನು ಸಿದ್ಧಗೊಳಿಸುವರು. ಹಿಂದೆ ಇದು ಗ್ರಾಮದ ಜನರ ಕೆಲಸವಾಗಿತ್ತು. ಕೆಲವು ಗ್ರಾಮಗಳಲ್ಲಿಕಟ್ಟಿಗೆಯನ್ನು ಧರ್ಮಾರ್ಥವಾಗಿ ಕೊಡುತ್ತಿದ್ದರು ಯಾ ಗ್ರಾಮಸಭೆಗಳು ಖರೀದಿಸಿ, ಬಳಿಕ ಅದರ ಮೌಲ್ಯವನ್ನು ವಸೂಲಿಮಾಡುತ್ತಿದ್ದರು. ಮುಂಬಯಿಯಂತಹ ನಗರಗಳಲ್ಲಿ ಇದೆಲ್ಲವನ್ನು ಸ್ಮಶಾನದ ನೌಕರರು ಮಾಡುತ್ತಾರೆ. ಬಿಳಿ ಬಟ್ಟೆಯೊಂದರ ಹೊರತು ಇತರ ಎಲ್ಲಾ ಬಟ್ಟೆಗಳನ್ನು ಮತ್ತು ಹೂಗಳನ್ನು ಹೆಣದ ಮೇಲಿಂದ ತೆಗೆಯುತ್ತಾರೆ. ಶವಕ್ಕೆ ಬೆಂಕಿ ಹಚ್ಚುವುದಕ್ಕೆ ಮೊದಲು ಅದರ ಕೈಗಳಿಗೆ ಮತ್ತು ಕಾಲ್ಬೆರಳುಗಳಿಗೆ ಕಟ್ಟಿದ ಗಂಟುಗಳನ್ನು ಬಿಚ್ಚುತ್ತಾರೆ. ಸ್ಮಶಾನದಿಂದ ಮರಳುವುದಕ್ಕೆ ಮುಂಚೆ ಬೆಂಕಿ ಶವವನ್ನು ಸಂಪೂರ್ಣ ಸುಟ್ಟಿದೆ ಎಂದು ಖಾತ್ರಿ ಮಾಡಿಕೊಂಡು ಪ್ರಾರ್ಥನೆ ಮಾಡುತ್ತಾರೆ. ಮುಂದಿನ ಧಾರ್ಮಿಕ ಸಂಸ್ಕಾರಕ್ಕಾಗಿ ಮೃತನ ಸಂಬಂಧಿಕರು 'ಅಸ್ಥಿ' ಎಲುಬುಗಳನ್ನು ಒಟ್ಟು ಮಾಡಿ ಒಂದು ಕುಡಿಕೆಯಲ್ಲಿ ಸಂಗ್ರಹಿಸುತ್ತಾರೆ. ಈ ಅಸ್ಥಿಯನ್ನು ಅಂತಿಮ ಸಂಸ್ಕಾರ ಕ್ರಿಯೆ ನಡೆಯುವ ತನಕ ಮನೆಯ ಹೊರಗೆ ಇಡುತ್ತಾರೆ.

**ದುಃಖದ ಗಂಜಿ ('ಸಾವುದ ಗಂಜಿ')**

ಅಂತ್ಯಕ್ರಿಯೆ ಪೂರ್ಣಗೊಂಡು ಮನೆಗೆ ಮರಳಿದ ನಂತರ ಹತ್ತಿರದ ಸಂಬಂಧಿಕರಲ್ಲಿ ಸಾವಿನ ಗಂಜಿಯನ್ನು (ಅಕ್ಕಿಯನ್ನು ಬೇಯಿಸಿ ಮಾಡಿದ ನೀರಿನ ಒಟ್ಟಿಗಿರುವ ಅನ್ನ) ತೆಂಗಿನಕಾಯಿಯ ಚಟ್ನಿಯೊಂದಿಗೆ ಸೇವಿಸುತ್ತಾರೆ. ಸಾವಿನ ಕಾರಣ ಊಟ ಮಾಡದೆ ಉಪವಾಸ ಕುಳಿತಿದ್ದ ಕುಟುಂಬದವರನ್ನು ಉಣ್ಣುವಂತೆ ಮಾಡಲು ಬಹುಶಃ ಇದು ಆಚರಣೆಗೆ ಬಂದಿರಬೇಕು. ಕೆಲವು

ಕಡೆ ಮೃತನಾದ ವ್ಯಕ್ತಿಯ ಕೋಣೆಯ ಮೂಲೆಯಲ್ಲಿ ದೀಪಹಚ್ಚಿ ಒಂದು ಲೋಟ ತುಂಬ ನೀರು ಇಡುತ್ತಿದ್ದರು. ಈಗ ಅಲ್ಲಿ ಮೃತಪಟ್ಟ ವ್ಯಕ್ತಿಯ ಭಾವಚಿತ್ರವನ್ನಿಟ್ಟು ಅಂತ್ಯಕ್ರಿಯೆಯ ತನಕ ದೀಪ ಬೆಳಗಿಸುವ ಕ್ರಮವಿದೆ.

**ಸಾವಿನ ಸೂತಕ ('ಕರ/ಪಿಲೆ')**

ಕುಟುಂಬದ ಸದಸ್ಯ ತೀರಿಕೊಂಡ ಬಳಿಕ ಕುಟುಂಬದ ಎಲ್ಲರೂ 16 ದಿನಗಳವರೆಗೆ ಸೂತಕ ('ಕರ/ಪಿಲೆ') ಪಾಲಿಸುತ್ತಾರೆ. ಈ ಕಾಲದಲ್ಲಿ ಅವರು ದೇವಾಲಯಕ್ಕೆ ಹೋಗುವಂತಿಲ್ಲ ಮತ್ತು ಮಂಗಳ ಕಾರ್ಯಗಳಲ್ಲೂ ಭಾಗವಹಿಸಬಾರದೆಂದಿದೆ. ಇದನ್ನು ಒಂದೇ ಮನೆದೈವವನ್ನು ಪೂಜಿಸುವವರರೆಲ್ಲರೂ ಅವರು ಎಲ್ಲೇ ಇದ್ದರೂ ಪಾಲಿಸುತ್ತಾರೆ.

**ಸೀಯಾಳ ಸಮರ್ಪಣೆ ('ಬೊಂಡ ಕಡ್ತ್‌ದ್ ದೀಪಿನಿ')**

ಶವ ಸಂಸ್ಕಾರ ಹಳ್ಳಿಯಲ್ಲಿ ಆಗಿದ್ದರೆ, ಐದನೆಯ ದಿನದಂದು ಶವ ದಹನ ಮಾಡಿದ ಸ್ಥಳದಲ್ಲಿನ ಹೊಯ್ಗೆ/ಮಣ್ಣನ್ನು (ಅಸ್ಥಿ ಸಮೇತ) ರಾಶಿ ಹಾಕಿ, ಅದರ ಮೇಲೆ ಒಂದು ತುಳಸಿ ಗಿಡವನ್ನು ನೆಡುತ್ತಾರೆ. ಮೃತನಾದ ವ್ಯಕ್ತಿಯ ಮಗ ಒಂದು ಕೆತ್ತಿದ ಎಳನೀರನ್ನು ('ಬೊಂಡ') ತಲೆಯ ಮೇಲೆ ಹೊತ್ತು ತಂದು ಆ ಮಣ್ಣಿನ ರಾಶಿಯ ಎದುರು ಇಡುತ್ತಾನೆ. ಇದಕ್ಕೆ 'ಬೊಂಡ ಕಡ್ತ್‌ದ್ ದೀಪಿನಿ' ಅನ್ನುತ್ತಾರೆ. ಗುರಿಕಾರ ಇಲ್ಲವೆ ಒಬ್ಬ ಹಿರಿಯ ವ್ಯಕ್ತಿ ಪ್ರಾರ್ಥನೆ ಮಾಡಿದ ಬಳಿಕ ಮೃತನಾದ ವ್ಯಕ್ತಿಯ ಮಗ ಆ ಮಣ್ಣಿನ ರಾಶಿಯ ಮೇಲೆ ಸೀಯಾಳದ ನೀರನ್ನು ಸುರಿಯುತ್ತಾನೆ. ಆ ಆಚರಣೆಯನ್ನು ಮುಂಬಯಿಯಂಥ ಪಟ್ಟಣಗಳಲ್ಲಿ ಮಾಡುವುದು ಅಸಾಧ್ಯವಾಗಿದೆ. ಯಾಕೆಂದರೆ ಪಟ್ಟಣಗಳಲ್ಲಿರುವ ಚಿತೆಯನ್ನು ಮತ್ತೊಂದು ಹೆಣವನ್ನು ಸುಡಲಿಕ್ಕಾಗಿ ಕೂಡಲೆ ಉಪಯೋಗಿಸುತ್ತಾರೆ. ಆದರೆ ಕೆಲವರು ಈ ಆಚರಣೆಯನ್ನು ತಮ್ಮ ಕಟ್ಟಡದ ವಠಾರದಲ್ಲೆ ಕಡಿಮೆ ವಸ್ತುಗಳನ್ನು ಉಪಯೋಗಿಸಿ ಮಾಡುತ್ತಾರೆ ಮತ್ತು ಆಬಳಿಕ ಮಣ್ಣು, ಅಸ್ಥಿ ಮತ್ತು ಎಳನೀರನ್ನು ಸಮುದ್ರಕ್ಕೆ ಹಾಕುತ್ತಾರೆ.

**13/16ನೆಯ ದಿನ ಆಚರಿಸುವ ವಿಧಿ**

13/16ನೆಯ ದಿನ ಯಾವಾಗ ಎಂದು (ಸತ್ತ ದಿನ ಯಾ ಶವ ಸಂಸ್ಕಾರ ಮಾಡಿದ ದಿನ) ಖಚಿತವಾಗಿ ಹೇಳಲಾಗುವುದಿಲ್ಲ. ಮೃತನಾದ ವ್ಯಕ್ತಿ ಕುಟುಂಬದ ಹಿರಿಯನಾಗಿದ್ದರೆ ಸಂಸ್ಕಾರ 16ನೆಯ ದಿನ ನಡೆಯುತ್ತದೆ. ಇತರರ ಮಟ್ಟಿಗೆ ಅದು 13ನೆಯ ದಿನವಾಗಿರುತ್ತದೆ. ಸಾಮಾನ್ಯವಾಗಿ ಮೃತನಾದವನ ಹತ್ತಿರದ ಸಂಬಂಧಿಕರು 16ದಿನಗಳ ತನಕ ದೇವಾಲಯಕ್ಕೆ ಹೋಗುವುದಿಲ್ಲ ಮತ್ತು ಶುಭ ಕಾರ್ಯದಲ್ಲಿ ಪಾಲ್ಗೊಳ್ಳುವುದಿಲ್ಲ.

**ಮನೆಯಲ್ಲಿ ನಡೆಯುವ ಆಚರಣೆಗಳು**

ಕುಟುಂಬದ ಹತ್ತಿರದ ಸದಸ್ಯರು ಕೊನೆಯ ಆಚರಣೆಗಾಗಿ ಬೆಳಿಗ್ಗೆ ಒಟ್ಟು ಸೇರಿ, ಬಾಳೇಕಾಯಿ, ಬಾಳೇದಿಂಡು, ಬೂದು ಕುಂಬಳಕಾಯಿ ಮೊದಲಾದವುಗಳನ್ನು ಚಾಪೆಯಲ್ಲಿಟ್ಟು ಅದಕ್ಕೆ ಸುತ್ತ ಬಂದ ನಂತರ ಮನೆಯ ಹೆಂಗಸರು ಸುತ್ತಾಗಿ ಕುಳಿತು ಅವ್‌ನ್ನು ಕತ್ತರಿಸಲು ಆರಂಭಿಸುತ್ತಾರೆ. ಈ ವಿಧಿ, ಗುರಿಕಾರನ ಮನೆಯ ಹೆಂಗಸರು ಮತ್ತು ಮಡಿವಾಳನ ಮನೆಯ ಹೆಂಗಸರ ಮೇಲ್ವಿಚಾರಣೆಯಲ್ಲಿ ನಡೆಯುತ್ತದೆ. ಬೂದು ಕುಂಬಳಕಾಯಿಯನ್ನು 'ಕೊದ್ದೆಲ್' ತಯಾರಿಸಲಿಕ್ಕೂ, ಬಾಳೆಯ ದಿಂಡನ್ನು ಪಲ್ಯ

ತಯಾರಿಸಲಿಕ್ಕೂ ಉಪಯೋಗಿಸುತ್ತಾರೆ. ಗ್ರಾಮದ ಮಡಿವಾಳ ನೀರು ಚಿಮುಕಿಸಿ ಶುದ್ಧ ಮಾಡಿದ ಬಳಿಕ ಗಂಡಸರು ಕ್ಷೌರ ಮಾಡಿಸಿಕೊಳ್ಳುತ್ತಾರೆ.

**ಶವಸಂಸ್ಕಾರ ಮಾಡಿದಲ್ಲಿ ನಡೆಸುವ ಕಾರ್ಯಕ್ರಮಗಳು**

ಅದೇ ದಿನ ಶವ ಸಂಸ್ಕಾರ ನಡೆದ ಜಾಗದಲ್ಲಿ ಗ್ರಾಮದ ಮಡಿವಾಳನು 'ದೂಪೆ'ಯನ್ನು ನಿರ್ಮಿಸುತ್ತಾನೆ. ಸಾಮಾನ್ಯವಾಗಿ ಈ 'ದೂಪೆ' ಚಕ್ರಾಕಾರದ ಒಂದು ರಚನೆಯಾಗಿದ್ದು ಅದರ ಮೇಲ್ತುದಿಯನ್ನು ಮನೆಯ ಮಾಡಿನಂತೆ ಜೋಡಿಸುತ್ತಾರೆ. ಕೆಲವು ಶ್ರೀಮಂತರ ಮತ್ತು ಪ್ರಸಿದ್ಧ ವ್ಯಕ್ತಿಗಳ ವಿಶೇಷ ತರದ ದೂಪೆ ನಿರ್ಮಿಸುವ ಪದ್ಧತಿ ಇದೆ. ತಮ್ಮ ಅಂತಸ್ತನ್ನು ತೋರಿಸಲಿಕ್ಕಾಗಿ ಹೀಗೆ ಮಾಡುತ್ತಾರೆ.

**ಪಿಂಡ ಹಾಕುವುದು ('ದೂಪೆಗ್ ನುಪ್ಪುಪಾಡುನು')**

ಮೃತನ ಗಂಡುಮಕ್ಕಳು ಸ್ನಾನಮಾಡಿ ಧೋತಿ ಉಟ್ಟು ಶಾಲು ಹೊದ್ದುಕೊಳ್ಳುತ್ತಾರೆ. ಈ ಕ್ರಿಯೆಗಳು ಊರಿನ ಗುರಿಕಾರ ಮತ್ತು ಮಡಿವಾಳರ ನೇತೃತ್ವದಲ್ಲಿ ನಡೆಯುತ್ತಿತ್ತು. ಬೆಳಿಗ್ಗೆ ಕತ್ತರಿಸಿದ ತರಕಾರಿಗಳಿಂದ ತಯಾರಿಸಿದ ಆಹಾರವನ್ನು ಒಂದು ತಟ್ಟೆಯಲ್ಲಿ ಕುಟುಂಬದ ಹತ್ತಿರದ ಸಂಬಂಧಿಕರು ಬಡಿಸುತ್ತಾರೆ. ಮೃತನಾದ ವ್ಯಕ್ತಿಗೆ ಕೊಡುತ್ತಿರುವ ಈ ಆಹಾರ ಅವನಿಗೆ ಕೊಡುವ ಮೊದಲ ಊಟ ಎಂದು ತಿಳಿಯಲಾಗುತ್ತದೆ. ತೀರಿಕೊಂಡ ವ್ಯಕ್ತಿಯ ಮಗ ಮನೆಯ ಹೊರಗಿನ ಮೆಟ್ಟಿಲಲ್ಲಿ ಕುಳಿತುಕೊಳ್ಳುತ್ತಾನೆ. ಮೃತನಾದವನ ಪತ್ನಿ ಇಲ್ಲವೆ ಮನೆಯ ಹಿರಿಯ ಹೆಂಗಸು ಊಟದ ತಟ್ಟೆಯನ್ನು ಮಗನ ಬಟ್ಟೆ ಸುತ್ತಿದ ತಲೆಯ ಮೇಲೆ ಇಡುತ್ತಾಳೆ. ಮೃತನ ಮಗ ಆಹಾರವನ್ನು ದೂಪೆಯ ಎದುರಿಗೆ ಇಡುತ್ತಾನೆ. ಹಿಂದೆ ಮೃತನಾದವನ ಇಬ್ಬರು ಗಂಡು ಮಕ್ಕಳು ದೂಪೆಯ ಅನ್ನವನ್ನು ಪಲ್ಲಕ್ಕಿಯಲ್ಲಿ ಕೊಂಡುಹೋಗುವ ಪದ್ಧತಿ ಇತ್ತು. ಬಳಿಕ ಸಂಬಂಧಿಕರು ಒಬ್ಬೊಬ್ಬರಾಗಿ ಒಂದೆರಡು ಹಿಡಿ ಆಹಾರವನ್ನು ದೂಪೆಯೊಳಗೆ ಇಟ್ಟಿದ್ದ ಬಾಳೆ ಎಲೆಯಲ್ಲಿ ಇಡುತ್ತಿದ್ದರು. ಇದನ್ನು 'ದೂಪೆಗ್ ನುಪ್ಪು ಪಾಡುನು' ಎಂದು ಹೇಳುತ್ತಿದ್ದರು. ಮೃತನಾದವನ ಆತ್ಮಕ್ಕೆ ಪ್ರಾರ್ಥನೆ ಸಲ್ಲಿಸಿದ ಬಳಿಕ ಮಡಿವಾಳನು ದೂಪೆಯ ಸುತ್ತ ನೀರು ಸಿಂಪಡಿಸಿದಾಗ ಈ ವಿಧಿಯು ಮುಕ್ತಾಯವಾಗುವುದು. ಮನೆಯನ್ನು ಪ್ರವೇಶಿಸುವುದಕ್ಕೆ ಮುಂಚೆ ಕೈಕಾಲು ತೊಳೆದು ಮನೆಗೆ ಪ್ರವೇಶಿಸುವ ಮೊದಲು, ಮಡಿವಾಳನು ಮತ್ತೊಮ್ಮೆ ಎಲ್ಲರ ತಲೆಯ ಮೇಲೆ ನೀರು ಚಿಮುಕಿಸಿ ಶುದ್ಧಗೊಳಿಸುವ ಪದ್ಧತಿ ಇತ್ತು.

**ಮೃತರ ಆತ್ಮವನ್ನು ಒಳಗೆ ಕರೆಯುವುದು ('ಉಲಯಿ ಲೆಪ್ಪನು')**

ಅಂದಿನ ರಾತ್ರಿ ಸಂಬಂಧಿಕರು ಖಾಸಗಿ ಪದ್ಧತಿಯಂತೆ 'ಅಗೆಲ್' ಬಡಿಸಿ ಅದನ್ನು ಮೃತ ವ್ಯಕ್ತಿಯು ತನ್ನ ಪೂರ್ವಜರ ಜೊತೆಗೂಡಿ ಸ್ವೀಕರಿಸುವಂತೆ ಪ್ರಾರ್ಥಿಸುತ್ತಾರೆ. ಈ ಪದ್ಧತಿಯಲ್ಲಿ ಮಾಂಸಾಹಾರಿ ಆಹಾರವಿದ್ದು ಅದನ್ನು ಕುಟುಂಬದ ಸದಸ್ಯರೆಲ್ಲ ಒಟ್ಟಿಗೆ ಕುಳಿತು ಊಟ ಮಾಡುತ್ತಾರೆ.

**'ಕಾಲೆಕೋಲ'**

ಕಾಲೆಕೋಲದ ಆಚರಣೆ ಅಪರೂಪವಾಗಿದ್ದು ಶ್ರೀಮಂತರು ಮಾತ್ರ ಅದನ್ನು ಆಚರಿಸುತ್ತಿದ್ದರು. ತುಂಬಾ ಪ್ರಾಯವಾದ ವ್ಯಕ್ತಿ ತೀರಿಕೊಂಡಾಗ ಮಾತ್ರ ಇದನ್ನು ಆಚರಿಸುತ್ತಾರೆ. ಈಗ ಈ ಪದ್ಧತಿ ಬಹಳ ಕಡಿಮೆಯಾಗಿದೆ.

**ಮುಖ್ಯ ಉದ್ದೇಶ**

ಕುಟುಂಬದ ಒಬ್ಬ ಗೌರವಾನ್ವಿತ ವಯಸ್ಸಾದ ವ್ಯಕ್ತಿ ತೀರಿಕೊಂಡಾಗ ಅವನನ್ನು ನೋಡಲು ಮತ್ತು ಅವನ ಮಾತು ಕೇಳಲು ಕುಟುಂಬಸ್ಥರು ಬಯಸುತ್ತಾರೆ. ಹಲವು ಸಂದರ್ಭಗಳಲ್ಲಿ ಕುಟುಂಬದ ಎಲ್ಲಾ ಸದಸ್ಯರು ಅವನ ಮರಣಕ್ಕೆ ಮೊದಲು ಅವನ ಮರಣ ಶಯ್ಯೆಗೆ ಬಂದು ಮುಟ್ಟಿರುವುದಿಲ್ಲ. ಅಂಥಾ ಸಂದರ್ಭದಲ್ಲಿ ಮೃತರ ಆತ್ಮವನ್ನು ಆಹ್ವಾನಿಸಿ ಅವರ ಬುದ್ಧಿವಾದವನ್ನು ಅವರ ಕುಟುಂಬಸ್ಥರು ಕೇಳಬಯಸುತ್ತಾರೆ. ಈ ಆಚರಣೆಗೆ ಹೆಚ್ಚು ಸಮಯ ಮತ್ತು ತುಂಬಾ ಹಣ ವೆಚ್ಚವಾಗುವುದರಿಂದ, ಹಿಂದಿನ ಕಾಲದಲ್ಲಿ ಕೂಡಾ ಶ್ರೀಮಂತರು ಮಾತ್ರ ಈ ಆಚರಣೆ ಮಾಡುತ್ತಿದ್ದರು.



ಕಾಲೆಕೋಲದ ನರ್ತನ

**'ಕಾಲೆಕೋಲ'ಕ್ಕಾಗಿ ಮಾಡುವ ಸಿದ್ಧತೆ**

ಕಾಲೆಕೋಲದಲ್ಲಿ ನಾಲ್ವರು ಪಾಣರ'ರು ('ಪಂಬದನವರು') ಪ್ರಮುಖ ಪಾತ್ರಧಾರಿಗಳಾಗಿದ್ದು ಅವರು 'ಕಾಲೆಕೋಲ' ದರ್ಶನ/ನರ್ತನ ಮಾಡುತ್ತಾರೆ. ಕೊನೆಯ ಅಂತ್ಯಕ್ರಿಯೆ ಆಚರಿಸುವುದಕ್ಕೆ ಒಂದು ದಿನ ಮೊದಲು ಮೃತನಾದವನ ಕುಟುಂಬದವರು ಈ ಪಾಣರನ್ನು ಆಮಂತ್ರಿಸುತ್ತಾರೆ. ಅವರಿಗೆ 'ವೀಳ್ಯ'ವನ್ನಿತ್ತು (ವೀಳ್ಯದೆಲೆ ಮತ್ತು ಅಡಿಕೆ) 'ಕಾಲೆಕೋಲ'ದಲ್ಲಿ ಭಾಗವಹಿಸಲು ಒಪ್ಪಂದ ಮಾಡಿಕೊಳ್ಳುತ್ತಾರೆ. ಅವರ ಊಟಕ್ಕಾಗಿ ಪಡಿ (ಅಕ್ಕಿ), ಬಾಳೆಕಾಯಿ, ಬಾಳೆದಿಂಡು ಮತ್ತು ಬೂದು ಕುಂಬಳಕಾಯಿಗಳನ್ನು ಇತ್ಯಾದಿಗಳನ್ನು ಕೊಡುತ್ತಾರೆ. ಇವು ದೊರೆತ ಬಳಿಕ ಪಾಣೂರರ ಮನೆಯವರು ಅವರ ಊಟದ ತಯಾರಿ ಮತ್ತು ಮರುದಿನದ ಆಚರಣೆಗೆ ಸಿದ್ಧತೆ ನಡೆಸುತ್ತಾರೆ.

**ಪ್ರಮುಖ ಪಾತ್ರಧಾರಿಗಳು**

'ಕೋಲ'ದಲ್ಲಿ ಪಾತ್ರಧಾರಿಗಳಂತೆ ವೇಷಧರಿಸಿದ ಇಬ್ಬರು 'ಬಂಟರು' ಕೆಂಪು ಬಟ್ಟೆ ಉಟ್ಟು ತಲೆಗೆ ಮುಕುಟ, ಸೊಂಟಕ್ಕೆ ಚಿಂದಿಯಂತೆ ಸಿಗಿದ ತೆಂಗಿನ ಸೋಗೆ ಸುತ್ತಿ, ಕಾಲಿಗೆ 'ಗಗ್ಗರ' ಹಾಕಿಕೊಂಡಿರುತ್ತಾರೆ. ನಿಶ್ಚಿತ ಕುಣಿಯುವ ಸ್ಥಳಕ್ಕೆ ಬಂದು ಅವರು

ಮೊದಲು ಹಾಡಿಗೆ ('ಪಾಡ್ದನ'ಕ್ಕೆ) ತಕ್ಕಂತೆ ಕುಣಿಯುತ್ತಾರೆ. ಸ್ವಲ್ಪ ಸಮಯದ ನಂತರ ಇನ್ನೊಬ್ಬ ಪಾತ್ರಧಾರಿ ಕುದುರೆಯಂತೆ ವೇಷಧರಿಸಿ ಮೊದಲಿನ ಇಬ್ಬರು ಪಾತ್ರಧಾರಿಗಳ ಜೊತೆ ಸೇರಿಕೊಳ್ಳುತ್ತಾನೆ. ಸ್ವಲ್ಪ ಸಮಯ ಅವರ ಜೊತೆಯಲ್ಲಿ ಕುಣಿತ ನಡೆಯುತ್ತಿರುತ್ತದೆ. ಕೊನೆಯಲ್ಲಿ ಕಪ್ಪು ಬಟ್ಟೆ ಉಟ್ಟು, ಶರೀರಕ್ಕೆ ಕಪ್ಪು ಬಣ್ಣ ಬಳಿದುಕೊಂಡು (ಭೂತದಂತೆ ಕಾಣುವ) ಪಾಣರ ಪಾತ್ರಧಾರಿ ಭಯಂಕರವಾಗಿ ಆರ್ಭಟ ಮಾಡುತ್ತಾ ಎಲ್ಲಾ ಕಡೆ ಸುತ್ತುಹಾಕುತ್ತಾನೆ. ಬಳಿಕ ಈ ಕಾಲೆಕೋಲದ ಪ್ರೇತ ಕೂಡ ನಿಶ್ಚಿತ ಕುಣಿಯುವ ಸ್ಥಾನಕ್ಕೆ ಬಂದು ಇತರ ಮೂವರ ಜೊತೆ ಸೇರಿ ನರ್ತಿಸುತ್ತದೆ. ನರ್ತನ ಪ್ರಕ್ರಿಯೆ ಮುಗಿದ ಬಳಿಕ 'ಕಾಲೆಕೋಲ' ಪ್ರೇತ ಕುಟುಂಬದ ಸದಸ್ಯರನ್ನು ಸಂಬೋಧಿಸಿ ಮಾತನಾಡುತ್ತದೆ. ಸಾಮಾನ್ಯವಾಗಿ 'ಕಾಲೆಕೋಲ'ದ ಪ್ರೇತ ದುಃಖಕ್ಕೆ ಒಳಗಾದ ಕುಟುಂಬದವರನ್ನು ಸಾಂತ್ವನಗೊಳಿಸುತ್ತಾ, ಅಗಲಿದ ಆತ್ಮ ಕುಟುಂಬಕ್ಕೆ ಒಳ್ಳೆಯದನ್ನು ಬಯಸುತ್ತಿರುವುದಾಗಿಯೂ, ಕುಟುಂಬದವರು ಒಟ್ಟಾಗಿದ್ದು ಕುಟುಂಬದ ಸಂಪ್ರದಾಯವನ್ನು ಪಾಲಿಸುತ್ತಿರಬೇಕೆಂದು ಬುದ್ಧಿವಾದ ಹೇಳುತ್ತದೆ.

**ಆಚರಣೆಯ ಮುಕ್ತಾಯ**

'ಕಾಲೆಕೋಲ'ದ ಪ್ರೇತದ ಪಾತ್ರಧಾರಿಯ ಕೊನೆಯ ಕರ್ತವ್ಯ, ನರ್ತನದ ವೇಳೆ ಉಪಯೋಗಿಸಿದ ಎರಡು ಕೋಲುಗಳನ್ನು ದೂಪೆಯ ಪಕ್ಕದಲ್ಲಿ ನೆಡುವುದು. 'ಕಾಲೆಕೋಲ'ದಲ್ಲಿ ಪಾತ್ರಧಾರಿಗಳಾದ ಪಾಣರ'ರು ಸಮುದ್ರ ಇಲ್ಲವೆ ನದಿಯಲ್ಲಿ ಸ್ನಾನಮಾಡಲು ತೆರಳುತ್ತಾರೆ. ಆನಂತರ ಕುಟುಂಬದ ಸದಸ್ಯರು ಕೂಡ ಸ್ನಾನ ಮಾಡುತ್ತಾರೆ. ಸಾಧಾರಣವಾಗಿ ಮಧ್ಯಾಹ್ನದ ಹೊತ್ತಿಗೆ ಈ ಕಾರ್ಯಕಲಾಪಗಳು ಮುಗಿಯಲು, ಕುಟುಂಬದ ಸದಸ್ಯರು ಮನೆಯ ಇತರ ಕರ್ತವ್ಯಗಳ ಕಡೆಗೆ ಗಮನ ಕೊಡುತ್ತಾರೆ. 'ಕಾಲೆಕೋಲ'ದಲ್ಲಿ ಭಾಗವಹಿಸಿದ ಪಾಣರ'ರಿಗೆ ಅವರ ಜೊತೆ ಮಾಡಿದ ಮಾತುಕತೆಯಂತೆ ಸಂಭಾವನೆ ಕೊಡುತ್ತಾರೆ. ಕುಟುಂಬದ ಇತರ ಸದಸ್ಯರು ಕೂಡಾ 'ಕಾಲೆಕೋಲ'ದ ಪಾತ್ರಧಾರಿಗಳಿಗೆ ಸ್ವಲ್ಪ ಹಣವನ್ನು ದಾನ ರೂಪದಲ್ಲಿ ಕೊಡುತ್ತಾರೆ. ಇದು ಅಗಲಿದ ಆತ್ಮಕ್ಕೆ ಅವರು ಕೊಡವ ಕೊನೆಯ ದೇಣಿಗೆ (ಸಂದಾಯ) ಎಂದು ತಿಳಿಯಬಹುದು.

**ಸದ್ಯ ಅಸ್ತಿತ್ವದಲ್ಲಿರುವ ಪದ್ಧತಿ**

ನಮ್ಮವರು ವೈದಿಕ ಪದ್ಧತಿಯ ಪೂಜೆ (ಆರಾಧನೆ)ಯನ್ನು ಸ್ವೀಕರಿಸಿದ ಬಳಿಕ, ಶವ ಸಂಸ್ಕಾರಕ್ಕೆ ಸಂಬಂಧಿಸಿದ ಎಲ್ಲಾ ವಿಧಿಗಳು ನಮ್ಮ ಹಳೆಯ ಪದ್ಧತಿಯಂತೆಯೇ ನಡೆಯುತ್ತಿವೆ. 13/16ನೆಯ ದಿನದ ವಿಧಿಯನ್ನು ಬೆಳಗ್ಗಿನ ತಿಲಹೋಮವನ್ನಾಗಿ ಪರಿವರ್ತಿಸಲಾಗಿದ್ದು, ಅದನ್ನು ಬ್ರಾಹ್ಮಣ ಪುರೋಹಿತರಿಂದ ಮಾಡಿಸುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ ದೂಪೆ ಇಡುವ ಕ್ರಮವನ್ನು ಅನಾನುಕೂಲತೆಯಿಂದ ಬಿಟ್ಟು ಬಿಡಲಾಗಿದೆ. ಹೆಚ್ಚಾಗಿ, ಕೊನೆಯ ದಿನದ ಆಚರಣೆಯನ್ನು ಈಗ ದೇವಾಲಯ ಇಲ್ಲವೆ ಸಾರ್ವಜನಿಕ ಸಭಾಗೃಹದಲ್ಲಿ ಮಾಡುತ್ತಾರೆ.

**ಕಾಗೆಗೆ ಅನ್ನ ಇಡುವುದು ('ಕಕ್ಕೆಗ್ ನುಪ್ಪು ದೀಪಿನಿ')**

ದೂಪೆಯಲ್ಲಿ ಅನ್ನ ಇಡುವ ಆಚರಣೆಯನ್ನು 'ಕಕ್ಕೆಗ್ ನುಪ್ಪು ದೀಪಿನಿ' ಎಂದು ಪರಿಗಣಿಸಲಾಗಿದೆ. ಮನೆಯಲ್ಲಿ ಮಾಡಿದ ಇಲ್ಲವೆ ಧಾರ್ಮಿಕ ಸ್ಥಳದಲ್ಲಿ ಮಾಡಿಕೊಟ್ಟ ಆಹಾರವನ್ನು ವಿಧಿ ಪ್ರಕಾರ ಒಂದು ಬಟ್ಟಲಲ್ಲಿಟ್ಟು, ಮೃತನಾದವನ ಮಗ ಒಯ್ದು

ಕಾಗೆಗಳಿಗಾಗಿ ಬಯಲು ಪ್ರದೇಶದಲ್ಲಿ ಇಡುತ್ತಾನೆ. ಇದು ಸಸ್ಯಾಹಾರಿ ಆಹಾರವಾಗಿರುತ್ತದೆ. ರಾತ್ರಿ ಹೊತ್ತು, ಕುಟುಂಬದ ಸದಸ್ಯರು ಅಂತ್ಯಕ್ರಿಯೆಯ ಇನ್ನೊಂದು ಪದ್ಧತಿಯಾದ ಮೃತರ ಆತ್ಮವನ್ನು ತಮ್ಮ ಹಿರಿಯರೊಂದಿಗೆ ಸೇರಿಕೊಳ್ಳಲು ('ಉಲಯಿ ಲೆಪ್ಪುನು') ಪದ್ಧತಿಯನ್ನು ಆಚರಿಸುತ್ತಾರೆ. 'ಮಿತ್ತರಿ/ಮಿಸಿರಿ' ಇಟ್ಟು ಆನಂತರ ಕುಟುಂಬಸ್ಥರು ಒಟ್ಟು ಕುಳಿತು ಮಾಂಸಾಹಾರಿ ಊಟ ಮಾಡುತ್ತಾರೆ.